
# || ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯಃ ||



Tracking:

| Sr | Date | Remarks | By |
|---|---|---|---|
| 1 | 19/07/2012 | **Typing Started on** | **H K Srinivasa Rao** |
| 2 | 24/08/2012 | **Typing Ended on** | **H K Srinivasa Rao** |
| 3 | 08/01/2013 | **I Proof Reading & Correction** | **H K Srinivasa Rao & M S Venugopal** |
| | | | |

# || ಶ್ರೀ ಹಯವದನ ರಂಗವಿಠ್ಠಲ ಗೋಪೀನಾಥೋ ವಿಜಯತೇ ||

*Blessed by Lord and with His divine grace, we are pleased to publish this Magnanimous Work of Sri Vadiraja. It is a humble effort to make available this Great work to Sadhakas who are interested in the noble path of propagating Acharya Madhwa's Philosophy.*

*With great humility, we solicit the readers to bring to our notice any inadvertant typographical mistakes that could have crept in, despitegreat care.We would be pleased to incorporate such corrections in the next versions.Users can contact us, for editable version, to facilitate any value additions.*

*Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email :* **srkarc@gmail.com**

## ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ, ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ "ಜ್ಞಾನಯಜ್ಞ"

"ಮಾತೃದೇವೋಭವ-ಪಿತೃದೇವೋಭವ-ಆಚಾರ್ಯದೇವೋಭವ"

ಗ್ರಂಥ ಋಣ:ಶ್ರೀರಾಜಹಂಸ ಪ್ರತಿಷ್ಠಾನ, ಬೆಂಗಳೂರು ಇವರಿಂದ ಪ್ರಕಾಶಿತವಾದ ವೈಕುಂಠ ವರ್ಣನೆ ( ತತ್ತ್ವ ಸಾರ)

# ತತ್ವಸಾರ - ವೈಕಂಠವರ್ಣನೆ

## || ಮೋಕ್ಷಸಂಧಿ ||

ತತ್ವಸಾರದ ಸೊಬಗ ಧರೆಯೊಳು |
ವಿಸ್ತರಿಸಬೇಕೆಂದು ಮುನಿಕುಲರತ್ನ ಶ್ರೀಗುರು ವಾದಿರಾಜನು ಶ್ರುತಿ ಪುರಾಣಗಳ
ಮೊತ್ತವನು ನೆರೆ ಮಥಿಸಿ ಮೇಲಣ |
ಮುಕ್ತಿ ಸೃಷ್ಟಿಸ್ಥಿತಿಲಯಂಗಳನರ್ತಿಯಲಿ ಬಣ್ಣಿಸಿದ ಕತೆಯನು ಕೇಳಿ ಸಜ್ಜನರು ||

ಇದು ಪುಣ್ಯಕಥೆ, ಲೋಕಕ್ಕಿದೆ ಮುಕುತಿಯ ಪಥ ಇದ ಕೇಳುವವನೆ ಕೃತಾರ್ಥ |
ಇದು ಸರ್ವಸಾಧನ ವಿದುಗಳಿಗೆ ಸಮ್ಮತ ಮುದವನೀವದು ಕೇಳ್ವ ಜನಕೆ || 1 ||

ಮೇಲೆನಿಪ ನಾಟಿ ಮೊದಲಾದ ರಾಗಂಗಳ ತಾಳಮೇಳದಿ ನಾಲ್ಕು ಸಂಧಿ |
ಶ್ರೀಲೋಲ ಚರಿತೆಯ ತತ್ವ ರಹಸ್ಯದ ಮಾಲೆ ಕೇಳ್ವರಿಗಲಂಕಾರ || 2 ||

ಕನ್ನಡಿಯೋಳ್ ತೋರ್ಪಂತೆ ಪೂರ್ಣಪ್ರಜ್ಞರ ಮತದುನ್ನತ ತತ್ವ ಸಾರವನು |
ಕನ್ನಡದಿ ಬಣ್ಣಿಸಿದ ವಾದಿರಾಜಮುನಿಯ ಬಿನ್ನಪವೆಲ್ಲರು ಮನ್ನಿಪುದು || 3 ||

ನಿಷ್ಕಳಂಕ ಚಂದ್ರವದನ ಶುಕ್ಲವಸನ ಲಕ್ಷಶಶಿವರ್ಣ ಪ್ರಸನ್ನ |
ನಾಲ್ಕು ತೋಳಿನ ವಿಷ್ಣು ನಮ್ಮ ವಿಘ್ನಂಗಳ ಘಕ್ಕನೆ ಒರಸಿ ರಕ್ಷಿಸಲಿ || 4 ||

ನರನೆಂದು ಶೇಷನ ಪೆಸರು, ನಾರಾಯಣನೆ ಮೆರೆವ ಮೂಲ ರೂಪವೆನಿಪ |
ಗುರು ವ್ಯಾಸ, ನರೋತ್ತಮ ವಾಯು, ದೇವಿ ಲಕುಮಿ, ಸರಸ್ವತಿಗೊಂದಿಸಿ ಗ್ರಂಥ ವರೆವದು ಗಡ || 5 ||

ಗ್ರಂಥ ಮಾಡಿದ ವೇದವ್ಯಾಸ ಮುನೀಂದ್ರನ್ನ ವೃಂದಾರಕರ ಗುರುವೆಂದೊಂದಿಸಿತು |
ಇಂದಿರೇಶನಂಬ ಮೂಲನಾರಾಯಣನ ಚಂದುಳ್ಳ ಪೆಸರೆಂದೊಂದಿಸಿತು || 6 ||

ವಾಣಿಯ ಬಲಗೊಂಬೆ, ಪಾಣನಾಥನ ಪಾದಕ್ಕಾನೆರಗುವೆ, ರಮೆಯಡಿಗೆ |
ನಮಿಸುವ, ಹಯವದನ ದೇವೋತ್ತಮನ ಮಾನಸದಲ್ಲಿಟ್ಟು ನೆನೆವೆ || 7 ||

ಲಕ್ಷ್ಮೀನಾರಾಯಣಂ ವಂದೇ ತದ್ಭಕ್ತಪ್ರವರೋ ಹಿ ಯಃ |
ಶ್ರೀಮದಾನನ್ದತೀರ್ಥಾಖ್ಯೋ ಗುರುಸ್ತಂ ಚ ನಮಾಮ್ಯಹಂ ||
ಏವಾವತಾಲಂ ನನು ಸೂಚಿತೇನ ಗುಣಾರಸಾಮ್ಯೇSನತಿಶಾಯನೋSಸ್ಯ
ಹಿತ್ವೇತರಾನ್ ಪ್ರಾರ್ಥತೋ ವಿಭೂತಿಃ ಯಸ್ಯಾಙ್ಘ್ರಿರೇಣುಂ ಜುಷತೇSನಭೀಪ್ಸೋಃ ||

ಮಿಕ್ಕ ದೇವರ್ಕಳ ಲೆಕ್ಕಿಸದೆ ಲಕುಮಿ ಮನ ಉಕ್ಕಿ ಆತಗೆ ಮಾಲೇ ಇಕ್ಕಿದಳು |
ಅಕ್ಕರದಿ ಲಕುಮಿ ನಾರಾಯಣರ್ಗೆರಗಿ ತದ್ಭಕ್ತ ಮಧ್ವಮುನಿಗೆ ಶರಣೆಂಬೆ || 8 ||

ಸಿರಿ ಭೂಮಿ ದುರ್ಗೆಯರು ಜ್ಞಾನಾಮೃತ ಕರೆವರೆ ಗುರು ಪೂರ್ಣಪ್ರಜ್ಞರ ಪುಟ್ಟಿಸಿದರು ಗಡ |
ನರಲೋಕದ ನಾರಿಗೆ ಇವರ ಹೆರುವ ಭಾಗ್ಯ ದೊಕಕದೆಂದು ಶ್ರುತಿ ಯೋಷಣ ವೆಂದಿತು || 9 ||

ದಶಮತಿ ಎಂಬ ಪೆಸರೆಮ್ಮ ಗುರುವರಗೆ ದಶ ದಿಶಗಳಲಿ ಪ್ರಸಿದ್ಧ ಕಾಣಿರೋ |
ಎಸೆವ ಈ ನಾಮ ಅನಿಮಿಷರಿಗೊಬ್ಬರಿಗಿಲ್ಲ
ಋಷಿಗಿಲ್ಲ ಮಾನಿರಸೊಳಿಲ್ಲ ನಾಮಬಲದಿಂದೆಮ್ಮ ಗುರುವಿಗಿದು ಧರ್ಮ || 10 ||

ಪೂರ್ಣಪ್ರಜ್ಞರೆಂಬ ನಾಮ ನಮ್ಮ ಗುರುವರಗುಂಟು ಉನ್ನತೋಪನಿಷತ್ತು ದಶವೆಂಬ ಶಬ್ದಕೆ
ಪೂರ್ಣವೆಂಬರ್ಥವ ಪೇಳಿತಾಗಿ ದಶಮತಿಯೆಂಬುದನ್ಯರ ಪೇಳ್ವುದೆ ಮಧ್ವಮುನಿಯಲ್ಲ
ದಿನ್ನುತ್ತರೊತ್ತರನೊಲ್ಲದೆ ಪೂರ್ವೋಕ್ತಿ ಪೇಳ್ವುದೇ || 11 ||

ಇದು ದೇವರೊಳು ವೃಷಭನಾದ ವಾಯದೇವರ ಸದುಗುಣ ಉಳ್ಳ ತೃತೀಯ ರೂಪು ಗಡ |
ಬುಧರಿಗೆ ಬೋಧವಿತ್ತು ತುದಿಯಲ್ಲಿ ಮುಕ್ತಿ ಸಂಪದವೀವ ಈ ಗುರುವಿಗಿದಿರಾವ || 12 ||

ಮೊದಲದು ಮತಿ ಎಂಬ ಹನುಮನ್ತ ರೂಪ ಗಡ ಇದಿರಾದ ಪೃತನೆಗೆ ಕ್ಷಯವಿತ್ತ |
ಕದನ ಕರ್ಕಶ ಭೀಮ ದ್ವಿತೀಯಾವತಾರ ಗಡ ತುದಿಯ ರೂಪವಿದೆಂದು ಶ್ರುತಿ ಪೇಳಿತು |
ದರ್ಮತವ ತುಳಿಯಿತು ಕುಮತಿಯ ಹಳಿಯಿತು || 13 ||

ಮಧ್ವನೆಂಬ ವಾಯು ಹೃದ್ಗುಹದೊಳಿದ್ದ ಹರಿ ಎಲ್ಲರಾಳ್ವ ಸ್ವಾಮಿ ಎಂದು ಮಥಿಸುವರು ಗಡ |
ಹೊದ್ದಿ ಇವನ ಪಾದ ಈಶ ಮೊದಲಾದ ದೇವರು ಬುದ್ಧಿವಂತರಾದರೆಂದು ಶ್ರುತಿ ಕೀರ್ತಿಸುತು |
ಸಮುಮತವ ಹಬ್ಬಿಸಿತು ಜ್ಞಾನದೀಪ ಹಚ್ಚಿತು || 14 ||

ಸಂತರ್ ಮೆಚ್ಚೆ ವಿದ್ವಾನ್ ಮಧ್ವ ಉಜ್ಜಭಾರೆಂಬ ವೇದ ಸಂತೋಷದಿ ನಮ್ಮ ಗುರುವ ಕೊಂಡಾಡಿತು |
ಇಂತು ಸುಪ್ರಸಿದ್ಧ ಶ್ರುತಿ ತುತಿಸಿದ ಮಧ್ವಮುನಿ ಎಂಥ ಗುರುವರನು ನೀವೆ ನೋಡಿರೋ |
ಮುಕ್ತಿಯ ಬೇಡಿರೋ ಈ ಮತವ ಪಿಡಿಯಿರೋ ಕುಮತವ ಹಳಿಯಿರೋ ಇವರುಕ್ತಿಗೊಡಂಬಡಿರೋ ||15

ಸಪ್ತ ಸ್ವಸ್ರುರಘುಷೀರ್ವಾವಶಾನೋ ವಿದ್ವಾನ್ ಮಧ್ವ ಉಜ್ಜಭಾರಾ ದೃಶೇ ಕಂ |
ಅನ್ತರ್ಯೇಮೇ ಅನ್ತರಿಕ್ಷೇ ಪುರಾಜಾಃ ಇಚ್ಛನ್ ವವ್ರಿಮವಿದತ್ ಪೂಷಣಸ್ಯ ||

ಶ್ರುತಿಸ್ಮೃತಿಗಳರ್ಥವ ಮಥಿಸಿ ನಮ್ಮ ಕೃತಿಯನೆ ನಂಬಿರೋ ನಾವೆಂದುದೇ ತತ್ವ|
ಮತದಹಂಮಾನವ ಮಾಡದೆ ಮೇಲಣ ಸದ್ ಗತಿ ಬೇಕೆಂಬುವರೆಲ್ಲ ಇದ ಕೇಳಿರೊ |
ಎಂದೆಂದು ಪೇಳಿರೋ ಕುಮತವ ಕೀಳಿರೊ ಅಘಂಗಳ ಸೀಳಿರೋ || 16 ||

ಎಲ್ಲವಿಲ್ಲೆಂಬುವನ ನಾಲಿಗೆಯೆ ಇಲ್ಲವಾಯಿತಲ್ಲ ! ಇನ್ನೆಂತು ನಮ್ಮ ಕೂಡೆ ನುಡಿವ ?
ಬಲ್ಲವರಿಗಿಂತು ಬೋಧಿಸಿ ಜಗತು ಸತ್ಯವೆಂದು ನಿಲ್ಲಿಸಿದ ಮಧ್ವಮುನಿಗೆಣೆಗಾಣೆ ಇಂ
ತಲ್ಲದೆ ಮಾಣೆ ಶ್ರೀ ಹರಿಯಾಣೆ || 17 ||

ಈಗಲುಂಟು ಮೇಲೀ ಜಗವಿಲ್ಲವೆಂಬ ಮಾತು ನಿನ್ನಗಾಗದಲ್ಲ ತ್ರಿಕಾಲ ನಿಷೇಧವೆಂಬುವಗೆ |
ಕಾಗೆಯಂತೆ ಒಂದು ಭಾಗದರ್ಥವ ಕಂಡು ಮತ್ತೊಂದು ಭಾಗದರ್ಥವ ಕಾಣದಿರೆ ಕಾಣನೆನ್ನರೆ
ನಿನ್ನಾಧಮನೆನ್ನರೆ ನೋಡು ಕಣ್ಣಾರೆ || 18 ||

ಇಲ್ಲಿ ಇಲ್ಲವೆನೆ ಇನ್ನೊಂದು ದೇಶದೊಳಿಕ್ಕು ಈಗ ಇಲ್ಲವೆನೆ ಇನ್ನೊಂದು ಕಾಲದೊಳಿಪ್ಪುದು |
ಎಲ್ಲ ಕಾಲ ಎಲ್ಲ ದೇಶದಲ್ಲಿ ಜಗವಿಲ್ಲೆನೆ ಮೊಲ್ಲನ ಕೊಂಬಿನಂತೆ ಜಗವಿಲ್ಲದೆ ಪೋಕು |
ಸಲ್ಲದಲ್ಲ ಈ ವಾಕು ಇನ್ನು ಕಲಹ ಸಾಕು || 19 ||

ಬಲ್ಲವರು ಸತ್ಯವಾಗಿ ಜಗವಿಲ್ಲವೆಂಬರ್ಥವ ನೊಲ್ಲರಲ್ಲ ಶ್ರುತಿಯೊಳ್ ಸತ್ಯವೆಂಬ ಪದ
ವಿಲ್ಲವಾಗಿ ಇನ್ನೊಂದು ಕಡೆಯಿಂದ ತಂದರೆ ಬಾಯೊಳು ಕಲ್ಲು ಬೀಳುವುದಲ್ಲ ! ಮಿಥ್ಯವೆಂಬ ಪದವ
ತತ್ವವಾದಿಯೋದುವ ! ಉನ್ಮತ್ತನೇನೊರೆವ ? || 20 ||

ದ್ವಾಸುಪರ್ಣೆಂಬ ವೇದ ಭೇದವನ್ನೆ ಪೇಳಲು ಸರ್ವೇಶ ನಾನೆಂಬ ಮತದಾಸೆಯೆ ಸಲ್ಲ
ಈಶತನ ಪೋದಮೇಲೆ ಆದೀತೆಂಬ ಮಾತು ವಿಚಾರಿಸಲು ಕೂಡದು ನಿನಗೋಸುಗ ತನ್ನ
ಈಶತ್ವವನು ಚೆನ್ನಕೇಶವನು ಬಿಡನು || 21 ||

ಈ ಶ್ರುತಿಯ ಬಲದಿಂದ ಈಶತಯು ಪೋಕಳಿಸುವ ಆಶೆ ಬೇಡ ಈಶತ್ವ ಪೋದ ಮೇಲೀ ಶ್ರುತಿ
ಈಶನೈಕ್ಯ ಪೇಳ್ವುದೈಸೆಯವಾಗಿ ಈಶತ್ವವ ಪುಸಿಮಾಡದದರಿಂದಲೇ ಹೇಸಿ ಇಂತಕ್ಕು |
ಅನ್ಯೋನ್ಯಾಶ್ರಯ ಸಿಕ್ಕು ಸಾಕು ನಿನ್ನ ಸೊಕ್ಕು || 22 ||

ಅಂದು ಭೃಗುಮುನಿ ಬಂದು ಚಂದದ ವಕ್ಷವ ಕಾಲಿನಿಂದಲೊದೆಯಲವನ ಕುಂದು ನೋಡದೆ
ಇಂದಿರೇಶ ತನ್ನ ಸರ್ವೇಶ್ವರತ್ವ ರಕ್ಷಿಸಿದನೆಂದು ಕೊಂಡಾಡಿದ ಶ್ರುತಿ ಎಂದು ಹರಿಯ ತನ
ತಂದುಪಕಾರಿಯ ಚಂದವಾದ ಸಿರಿಯ ಕುಂದಿಸದೆಂದರಿಯ || 23 ||

ಕಾಲಿಲ್ಲ ಕರವಿಲ್ಲ ಕರ್ಣಂಗಳಿಲ್ಲ ಕಂಗಳಿಲ್ಲ ನಾಲಿಗೆಯಿಲ್ಲವೆನೆ ನೋವ ಮಾನವ |
ಈ ಲೋಕದಿ ಚೆಲುವ ಕಾಮನ ಗೆಲುವಾಕಾರದ ಶ್ರೀಲೋಲನ ನಿರಾಕಾರನೆಂದು ಪೇಳ್ವರೇ ?
ಸಂತರಿದ ಕೇಳ್ವರೇ ? ಇಂತೆನರು ಬಾಳ್ವರೆ ? || 24 ||

ಗುಣಿಯಲ್ಲವೆಂಬ ಮಾತು ನಿನಗೆ ಹೀನವಾದರೆ  ಅನಂತನಿಗೀ ಮಾತನೆನಬಹುದೇ ?
ಜನರು ಮಾಯಾವಿಯೆಂದು ನಿನ್ನನೆನೆ ಮುನಿವೆ ಮಾನವ
ಸನಕಾದಿಮುನಿ ಮಾನ್ಯನ ಮಾಯಾವಿ ಎಂಬರೆ ?
ಬುಧರಿದ ಕೈಗೊಂಬರೆ ? ಬಾಯೊಳ್ ಮಣ್ ತುಂಬರೆ ? || 25 ||

ಇಂತು ಪರಮತವೆಂಬ ಕಂತೆಯ ಪರಿದು ಬಲು
ಭ್ರಾಂತು ಗೊಳಿಸಿದ ಗುರು ಚಿಂತಾಮಣಿಯ |
ಸಂತತ ನೆನೆವುದು ಅಂತ್ಯವಿಲ್ಲದ ಪದವ
ಸಂತೋಷತೀರ್ಥರ ಕೃಪೆಯಿಂದೈದುವನು
ಅಲ್ಲಿ ಶ್ರೀಮಾಧವನು ಈವ ಮೋದವನು || 26 ||

ಹತ್ತು ಮತ್ತೇ ನಾಲ್ಕು ಲೋಕದ ಜೀವರ ಮೊತ್ತವ ತನ್ನ ಯುಕ್ತಿಯಿಂದ ಮಾಡಿ |
ತತ್ತತ್ ಸ್ಥಾನದಳಿಟ್ಟ ಸತ್ಯಲೋಕದೊಡೆಯನಡಿಗೆ ಪೊಡಮಡುವೆನು ||
ತತ್ತ್ವದ ಬಿತ್ತರದರ್ತಿಯ ತೋರುತಿರಲಿ ಅತ್ತಿತ್ತ ಪೋಗದಂತೆ ಚಿತ್ತ ತಿರುಹುತಲಿರಲಿ
ಮುಕ್ತಿಪಥದತ್ತ ಮನವ ನಡಿಸುತಿರಲಿ ತನ್ನ ಅರ್ತಿಯಿಂದ ಭೃತ್ಯನ ಭಾರ ನಿತ್ಯದಿ ಪೊತ್ತಿರಲಿ || 27 ||

ರಕ್ಕಸರುಕ್ಕ ತಗ್ಗಿಸಿದವಗೆ ದಕ್ಷನ ಶಿಕ್ಷಿಸಿದವಗೆ
ಯಕ್ಷಪತಿಯ ಸಖನೆನಿಪ ಕೈಲಾಸದ ಮುಕ್ಕಣ್ಣಗಾನು ಕೈಯ ಮುಗಿವೆನು|
ಮುಖ್ಯಮಾನಸ ತತ್ತ್ವಕ್ಕಭಿಮಾನಿಯಾಗೆ ನೀನು ದುಷ್ಕರ್ಮ ತತಿ ನಿನ್ನ ಕೃಪೆಯಿಂದ ನೀಗುವೆನು |
ಶುಷ್ಕವಾದಿಗಳ ಕಂಡಕಂಡಲಿ ನಗುವೆನು ಭಕ್ತಿಪಥವನ್ನೆ ಹಿತವೆಂದು ಬಗೆವೆನು |
ನೀನಿತ್ತ ಜ್ಞಾನದಿ  ಮುಕುತಿಗೆ ಹೋಗುವೆನು || 28 ||

ಸಕಲ ಸರುರಂಘ್ರಿಗೆರಗುವೆನು ಗುರುಗುಳ ವಿಕಸಿತ ಪಾದಪದುಮವನೆ ನೆನೆದು |
ನಿಖಿಲ ಜಗವ ಕಾವ ನರೆಯಣನ ಕಥೆಯ ಬಕುತಿಯಿಂದಾನು ಬಣ್ಣಿಪೆನು |
ಮುಕುತಿಯ ಸುಖವನು ಉಣಿಸುವೆನು ಯುಕುತಿಕೋವಿದರನು ಕುಣಿಸುವೆನು |
ಅಖಿಲ ಕುಜನರನು ದಣಿಸುವೆನು ಈ ಖಳರ ಮತವನು ಮಾಣಿಸುವೆನು || 29 ||

ಇಂದ್ರನ ರಾಜ್ಯವ ತಂದನ ಶುಭಗುಣಸಾಂದ್ರನ ಸುರಸಭಾ ಚಂದ್ರನ |
ನಂದನ ಕಂದನ ವಂದ್ಯನ ನಿತ್ಯಾನಂದನ ತುತಿಪೆ ಮುಕುಂದನ || 30 ||

ಶೌರಿಯ ನೆನೆವೆನುದಾರಿಯ ಕುಜನರ ವೈರಿಯ ಮಂದರೋದ್ಧಾರಿಯ |
ಹರಿಯ ದುರಿತನಿವಾರಿಯ ಸುಜನೋಪಕಾರಿಯ ಮುಕುತಿಗೆ ದಾರಿಯ || 31 ||

ಇಷ್ಟನ ದುರಿತ ಘರಟ್ಟನ ಜಗಕತಿ ದಿಟ್ಟನ ಸತತ ಸಂತುಷ್ಟನ |
ಶಿಷ್ಟನ ಶುಭಗುಣ ಪುಷ್ಟನ ತುತಿಪೆನುತ್ಕೃಷ್ಟನ ಶ್ರುತಿಗಿಂಬು ಕೊಟ್ಟನ || 32 ||

ನೀಲನ ನಿಜಜನ ಪಾಲನ ನಿರ್ಮಲಶೀಲನ ಸುಚರಿತ್ರಜಾಲನ |
ಬಾಲನ ಸಂಗೀತ ಲೋಲನ ತುತಿಪೆನು ಕಾಲನವರಿಗೆ ಅನಲನ || 33 ||

ರಂಗನ ಕರುಣಾಂತರಂಗನ ಖಲಕುಲಭಂಗನ ಮುನಿಜನ ಸಂಗನ |
ಅಂಗನಾಜನಕೆ ಅನಂಗನ ನಿತ್ಯಶುಭಾಂಗನ ತುತಿಪೆನುತ್ತುಂಗನ || 34 ||

ಹರಿಕಥೆಗಳ ಕೇಳದವ ಬಹುಕಾಲ ಬಾಳಿದರೆ ಫಲವೇನು ? ಕಾನನದ |
ಮರ ಸಾಸಿರ ಕಾಲವಿರದೆ? ಕಾಗೆಯ ಹೆಸರು ಚಿರಜೀವಿಯೆನರೆ ಸಜ್ಜನರು || 35 ||

ಕಾರುಕನ ತದಿ ಶ್ವಾಸವ ಬಿಡದೆ ? ಉರ ಹಂದಿ ನಾಯಿ ನರಿಗಳು |
ಪೊರಯಿಸಿಕೊಳವೆ ತಮತಮ್ಮುದರ ? ಮಾರಗೊಳಗಾಗಿ ರಮಿಸವೆ ?

ಮೂಷಕನ ಬಿಲದಂತೆ ಹರಿಕಥೆ ಕೇಳಿ ಸಂತೋಷಿಸದವನ ಕರ್ಣಗಳು |
ಶ್ರೀಶನ ಕ್ಷೇತ್ರಕ್ಕೆ ಪೋಗದ ಕಾಲ್ಗಳು ಪಾಷಾಣ ಪ್ರತಿಮೆಯಂಘ್ರಿಗಳು || 37 ||

ಹರಿಯ ನೋಡದ ಕಣ್ಣು ನವಿಲಿಯ ಕಣ್ಣು ನರಹರಿಯಪಾಡದವನ ಜಿಹ್ವೆ|
ವರಲಿ ಬಳಲುವ ಮಂಡೂಕನ ಜಿಹ್ವೆ ಹರಿಚರಣಕೆರಗದ ನರನು ವಾನರನು || 38 ||

ಏಳುದಿನ ಹರಿಕಥೆಯ ಕೇಳಿಯೊಬ್ಬ ದಾಳಿಯಿಡನೆ ಹರಿಪುರಕೆ ?
ಶ್ರೀಲೋಲನ ನೆನೆದೆರಡು ಘಳಿಗೆಯೊಳೊಬ್ಬ ಮೇಲೆನಿಪ ಮುಕ್ತಿಗೇರನೆ ? || 39 ||

ಅದರಿಂದ ನಾರಾಯಣನ ಕೊಂಡಾಡುವ ಬುಧರು ಸಂಸಾರವ ತೊರೆದು |
ಮುದದಿಂದ ವೈಕುಂಠಕೈದಿ ಶ್ರೀಕೃಷ್ಣನ ಪದ ಸನ್ನಿಧಿಯಲಿ ಸುಖಿಸುವರು || 40 ||

ತತೋ ವೈಕಣ್ಠಮಗಮದ್ ಭಾಸ್ವರಂ ತಮಸಃ ಪರಂ |
ಯತ್ರ ನಾರಾಯಣಃ ಸಾಕ್ಷಾತ್ ನ್ಯಾಸಿನಾಂ ಪರಮಾ ಗತಿಃ |
ಶಾನ್ತಾನಾಂ ನ್ಯಸ್ತದಣ್ಡಾನಾಂ ಯತೋ ನಾವರ್ತತೇ ಯತಿಃ ||

ಸಾಕ್ಷಾನ್ನಾರಾಯಣನಿಪ್ಪ ವೈಕುಂಠವ ಪೊಕ್ಕು ಬದುಕುವುದೇ ಮೋಕ್ಷ |
ಪಕ್ಷಪಾತವಲ್ಲ ಶುಕಮುನಿಯ ವಾಕ್ಯ ವಿವೇಕಿಗಳಿದ ನೀವೆ ನೋಡಿರೋ || 41 ||

ಎಂದೆಂದು ಕುಂಠನವೆಂಬ ನಾಶವಿಲ್ಲದಿಂದಿರೇಶನೆ ವಿಕುಂಠ |
ಚಂದದವನ ಮನೆಯೆನಿಪ ವೈಕುಂಠಕೆ ಮಂದಮತಿಯೆ ನಾಶ ಉಂಟೆ || 42 ||

ತನ್ನ ಮನೆ ಪೋದ ಮೇಲೆ ನಾರಾಯಣನು ಬನ್ನಗನಂತೆ ಕಾನನದಿ |
ವನ್ನಿತೆಯರ ಕೂಡಿ ಪಣ್ಣುಫಲ ಮೇಲುವನೆ ಮನ ಬಂದಂತೆ ನುಡಿವರೆ ||43 ||

ನಶ್ವರವಲ್ಲದ ಈ ಪದವೆ ಬುಧರಿಗೆ ಶಾಶ್ವತ ಸ್ಥಾನವೆನಿಪುದು |
ಭಾಸ್ವರ ವೈಕುಂಠವದರಿಂದ ಎಲ್ಲರಿಗು ನಿಶ್ಚಿತ ಮುಕುತಿ ಕಾಣಿರೊ || 44 ||

ಪರಮಾಗತಿ ಎಂದು ವೈಕುಂಠದರಸನ ಸಿರಿವರನ ಶುಕಯೋಗಿ ವರ್ಣಿಸಿದ |
ಅರಿಕೆಯುಳ್ಳ ಬುಧರು ಅದರಿಂದೀ ಪದವನ್ನು ಪರಮ ಮುಕುತಿಯೆನಬೇಕು || 45 ||

ಧನ್ಯಯತಿಗಳೀ ಲೋಕವ ಪೊಕ್ಕಮೇಲೆ ಪುನ್ನರಾವೃತ್ತಿ ಇಲ್ಲ ಗಡ |
ಇನ್ನೊಂದು ಮೋಕ್ಷ ಉಂಟೆಂಬ ಖಳರ ಮುನ್ನವ ಮರ್ದಿಸಿತಾಗಿ || 46 ||

ನ ಚ ಪುನರಾವರ್ತತೇ ಎಂಬ ವೇದಾಂತ ಮನ್ನಿಸಿದ ಮುಕ್ತಿಯ ಬಿಟ್ಟೆನ್ನೊಂದು |
ಹೆಸರಿಲ್ಲದ ಮುಕ್ತಿ ಸಲ್ಲದಾಗಿ ನಮ್ಮ ಎಸೆವ ವೈಕುಂಠವೆ ಮುಖ್ಯ ಮೋಕ್ಷ || 47 ||

ಹೇಳಿರೋ ವಾದಿ ! ತಮವೆಂಬ ನ್ನಿನ್ನಾಜ್ಞಾನ ಬೀಳುಕೊಟ್ಟ ಲೋಕ ಪುಸಿಯೆ ?
ಆಲೋಚಿಸು ನಿನ್ನ ಮತದ ರಹಸ್ಯವ ಈ ಲೋಕವೆ ದಿವ್ಯ ಮುಕುತಿ || 48 ||

ಇಂತು ನೋಡಲು ಸರ್ವ ಪದದ ಸಂಪದ ನಿನಗೆ ಭ್ರಾಂತ ಗಂಟಲು ಗಾಣವಾಯ್ತು |
ಹಂತತನವ ಬಿಡು ನಾವೆಂದರ್ಥವನ್ನೇ ಸಂತೋಷದಿಂದಗೀಕರಿಸು || 49 ||

ಲೋಕೈಕನಾಥ ನಾರಾಯಣಗೆ ಪ್ರಿಯವಾದ ವೈಕುಂಠ ಪುರಿಯ ವರ್ಣಿಪೆನು |
ಶ್ರೀಕಾಂತನಲ್ಲಿ ಮುಕ್ತರಿಗೆ ಎಂದೆಂದು ನಿರಾಕುಲ ಸುಖವಿತ್ತು ಪೊರೆವ || 50 ||

ಶ್ರೀಕೃಷ್ಣನಂಘ್ರಿಯ ನೆನೆಯದವರಿಗೀ ಲೋಕವೆಂದೆಂದು ದೊರಕದು |
ಪ್ರಕೃಷ್ಟಸತ್ವರಾಶಿಗಳಲ್ಲಿಪ್ಪುವು ಗಡ ಪ್ರಾಕೃತವಲ್ಲ ನಿತ್ಯ ಗಡ || 51 ||

ಎಂದೆಂದು ನಿತ್ಯ ಸನಾತನವೆಂಬ ಈ ಚಂದದ ಪದವು ದಿವ್ಯ ಗಡ |
ನಿಂದ್ಯ ತ್ರಿಗುಣಂಗಳು ಹೊಂದವೀ ಲೋಕಕ್ಕೆ ಕುಂದು ಕೊರತೆಗಳಿಲ್ಲ ಗಡ || 52 ||

ಅದರಿಂದ ಬೊಮ್ಮಾದಿ ದೇವರೆಲ್ಲರು ಹರಿಯ ಸದನವೆನಿಪ ಪುರತ್ರಯಕೆ |
ಮುದದಿಂದ ಕೈಮುಗಿದು ಪೂಜಿಸುವರೆಂದೆಂದೀ ಪದ ನಿತ್ಯ ಸಿದ್ಧರಾಸ್ಪದ ಗಡ || 53 ||

ಅಲ್ಲಿದ್ದ ವಾಪಿಕೂಪ ತಟಾಕಂಗಳು ಮತ್ತಲ್ಲಿದ್ದ ಮನೆ ಉಪ್ಪರಿಗೆಗಳಾಗಿ|
ಬಲ್ಲಿದ್ದ ರಮೆ ತನ್ನ ನಲ್ಲನ ಚಿತ್ತವ ವಲ್ಲಿಸ ಬೇಕೆಂದಿಹಳು ಗಡ || 54 ||

ಅರ್ಕಕೋಟಿಗಳಂತೆ ವೈಕುಂಠಲೋಕ ದಶ ದಿಕ್ಕಿನೊಳಗೆ ಬೆಳಗುವುದು |
ಲಕ್ಷ್ಮಿಗಲ್ಲದೆ ಇಂಥ ಕಾಂತಿ ಮಿಕ್ಕವರಿಗೆ ಬರ್ಗೆ ನೀವೆ ವಿಚಾರಿಸಿರೋ || 55 ||

ವೈಕುಂಠವೆಂಬ ಹರಿಯ ಲೋಕ ಬೊಮ್ಮನ ಲೋಕಕ್ಕಿಂತಲು ಮೇಲಿಹುದು |
ಶೋಕರಹಿತರಾದ ಸಿದ್ಧಸಾಧ್ಯರಲ್ಲಿ ಬೇಕಾದ ಸುಖವನುಣುತಿಹರು || 56 ||

ಲಕ್ಷ ಯೋಜನೆ ಮೇಲಿಕ್ಕನಂತಾಸನ, ಲಕ್ಷ್ಮೀಶನಿಹ ಶ್ವೇತದ್ವೀಪ |
ಲಕ್ಷವೈವತ್ತು, ವೈಕುಂಠ ಇಪ್ಪತ್ತೈದು ಲಕ್ಷ ಷೋಡಶ ಕೋಟಿಯಲಿಹುದು || 57 ||

ಜ್ಞಾನಸಾಧ್ಯವಾದ ಮುಖ್ಯ ಮುಕ್ತಿಸ್ಥಾನ ಶ್ರೀನಾಥನಿಹ ವೈಕುಂಠವೆಂದು |
ಯೇನಾಪವರ್ಗಾಖ್ಯವೆಂಬ ಭಾಗವತೋಕ್ತಿ ತಾನೆ ನಿರ್ಣಯಿಸಿ ಪೇಳಿತಲ್ಲ || 58 ||

ಇದೆ ಅಪವರ್ಗವೆಂದು ವ್ಯಾಸದೇವ ತಾನೊಲಿದು ಪೇಳ್ದ ಹರಿಯ ಪದವೆಮೋಕ್ಷ |
ಅಧಮ ವಾದಿಗಳಿಗಿದ ಕೇಳಿ ಚಿತ್ತದ ಮದವಳಿವುದು ಏನಾಶ್ಚರ್ಯ || 59 ||

ನಾಡ ಜೋಡಿಗಳ ಅನುಶಾಸನವ ನಂಬುವ ಮೂಢ ಸರ್ವರ ಗುರುವೆನಿಪ |
ಪ್ರೌಢರ್ಗೆ ಸಮ್ಮತರಾದ ವ್ಯಾಸರ ಮಾತ ನೋಡಿ ಮನ್ನಿಸದಿರೆ ನಗರೆ || 60 ||

ಭೇಜೇ ಖಗೇಂದ್ರಧ್ವಜಪಾದ ಮೂಲಮೆಂದೀ ಜಗತ್ ಖ್ಯಾತ ಭಾಗವತ |
ಓಜೆಯಿಂದಲಿ ಪೇಳಿತಾಗಿ ಅನ್ಯರ ಮತ ರಾಜಿಪುದೆಂತು ಸಭೆಯೊಳಗೆ || 61 ||

ಪೇಳೆಲೊ ವಾದಿ ಖಗೇಂದ್ರ ಧ್ವಜಪಾದಮೂಲ ನಿನ್ನ ಮುಕ್ತಿಯೊಳುಂಟೆ ?
ಈ ಲಿಂಗ ಹರಿಲೋಕಕ್ಕಸಾಧಾರಣವೆಂದು ಬಾಲಕರೆಲ್ಲರ್ ಬಲ್ಲರೈಸೆ ? || 62 ||

ಅಲ್ಲಿ ಕೃಷ್ಣನ ಪಾದ ಸೇವೆಯೆ ಕೈವಲ್ಯವಲ್ಲದೆ ಅವನೈಕ್ಯ ಸಲ್ಲ |
ಎಲ್ಲರು ಬಲ್ಲರು ಹರಿಯ ಭೇದವಲ್ಲದದಿಲ್ಲವೆಂಬುದನು || 63 ||

ಖಗೇಂದ್ರ ನಾಮವೆ ದ್ವೈತ ತರತಮಭಾವ ಬಗೆಯರುಪಿತು, ಪಾದ ಶಬ್ದ |
ಭಗವಂತ ಸಾಕಾರನೆಂದು ಪೇಳಿತು ವ್ಯಾಸೋಕ್ತಿಗೆ ಕಾಮಧೇನು ಇನ್ನು ಪ್ರತಿಯೇ ||64 ||

ಮುಕ್ತಿಯೊಳಿಹ ಭೇದ ಸತ್ಯವೆಂಬುದು ಸಿದ್ಧ ಮತ್ತೆ 'ನ ಯತ್ರ ಮಾಯಾ' ಎಂಬ |
ಯುಕ್ತ ಭಾಗವತೋಕ್ತಿ ಮುಕ್ತರ ಭೇದವ ಸತ್ಯವೆಂದು ಸ್ಥಾಪಿಸಿತಲಾ || 65 ||

'ಹರೇರನುವ್ರತಾ ಯತ್ರ' ಎಂದು ಸ್ಮೃತಿ ನಿರೂಪಿಸಿತು ಹರಿಯ ಭೇದ |
ಪರಮಾರ್ಥಸತ್ಯ, ನಿನಗೂ ಆ ಮಾಯೆ ಇರದೆ ಕಲ್ಪಿತವಾಗುವುದೆ ? || 66 ||

ಈಷನ್ಮಾಯೆ ಇರೆ ಯತ್ರ ಮಾಯಾ ನೇತಿ ವ್ಯಾಸನ ಸಾಮಾನ್ಯ ನಿಷೇಧ |
ಹೇಸಿ ಕೂಡುವುದೆ? ಪುಟ್ಟೊಂದು ಘಟವಿರಲು ನಾಸ್ತ್ಯತ್ರ ಘಟವೆಂದೆನ್ನುವರೇ ? || 67 ||

ನಿನಿಚ್ಛೆಗೆ ಬೇಕಾದರ್ಥವ ಪೇಳ್ವುದೆ ಶಬ್ದ ? ತನ್ನ ಶಕ್ಯವಾದರ್ಥವನೆ |
ಎನ್ನ ಬಹುದ್ಯೆಸೆ? ತುಹಿನ ಪರ ಶಬ್ದ ವಹ್ನಿಯರ್ಥವನು ನುಡಿವುದೆ ? || 68 ||

ರನ್ನ ತೆತ್ತಿಸಿದ ಚಿನ್ನದೇಳು ಕೋಟೆ ಮನ್ಮಥನಯ್ಯನ ಪುರಿಗೆ |
ತನ್ಮಧ್ಯದಲ್ಲಿ ಅಯೋಧ್ಯಾನಗರಿ ಸುವರ್ಣ ಗೋಪುರುದೊಳೊಪ್ಪುತಿಹುದು || 69 ||

ತನ್ಮಧ್ಯೇ ನಗರೀ ದಿವ್ಯಾ ಸಾಯೋಧ್ಯೇತಿ ಪ್ರಕೀರ್ತಿತಾ |
ಆರೂಢಯೌವನ್ಯೈರ್ನಿತ್ಯಾ ದಿವ್ಯ ನಾರೀನರೈರ್ಯುತಾ ||

ಸಿರಿದೇವಿ ತಾನೆ ಮುರಹರನ ಪಟ್ಟಣದೊಳು ಪರಿಪರಿಯ ಮನೆಯ ರೂಪದಲಿ |
ಮಿರಿ ಮಿರಿ ಮಿಂಚುವಳು ಅಷ್ಟಪ್ರಕೃತಿಯಿಂದ ವಿರಚಿತ ಗೃಹಗಳೊಪ್ಪುವವು || 70 ||

ಅನ್ನರ್ಘ್ಯ ರತ್ನ ಮಂದಿರದುಪ್ಪರಿಗೆಗಳ ಬಣ್ಣಿಸಲೆನ್ನಳವಲ್ಲ |
ರನ್ನದ ದ್ವಾರದ ಪ್ರಖರ ಕಾಂತಿಗೆ ತನ್ನಲೋಡುವುದಂಧಕಾರ || 71 ||

ಆಯುತಾರ್ಕ ಸಮಪ್ರಭಮೆಂಬ ಪಂಚರಾತ್ರ ಭಯವಿಲ್ಲದಚ್ಯುತನ ಪುರವ |
ಪ್ರಿಯದಿಂದ ಕೊಂಡಾಡಿತಾಗಿ ಈ ಪುರ ಕತ್ತಲೆಯ ಕೆಡಿಸುವುದೊಂದಚ್ಚರಿಯೆ ? || 72 ||

ನಾಲ್ಕು ದಿಕ್ಕುಗಳಲ್ಲಿ ಬಾಗಿಲ ಸಾಲ್ಗಳು ಚೌಕಶುದ್ಧವಾದ ಕೋಟೆಯೊಳಗೆ
ಲೋಕಪಾಲರ ಮನ್ನಣೆಯಿಂದಲಲ್ಲಿಗೆ ಶ್ರೀಕಾಂತನೊಮ್ಮೊಮ್ಮೆ ಬಾಹ || 73 ||

'ಸ ಏನಾನ್ ಬ್ರಹ್ಮ ಗಮಯತಿ' ಎಂಬ ಶ್ರುತಿ ನಯದಿಂದ ನಿರ್ಣೈಸಿತಾಗಿ |
ಪ್ರಿಯವಾದ ಲಿಙ್ಗದೇಹದ ಜೀವನ್ಮುಕ್ತರು ಜಯ ಜಯವೆನ್ನುತ್ತಿಹರಲ್ಲಿ || 74 ||

ಅಪ್ರತೀಕಾಲಂಬನರ ಮುಖ್ಯಪ್ರಾಣ ಸಪ್ತ ಪ್ರಾಕಾರಂಗಳೊಳಗೆ |
ಮುಕ್ತಿ ಪರಿಯಂತ ಭೋಗಂಗಳುಂಡು ಕೊಂಡಿಪ್ಪಂತೆ ಕಟ್ಟುಮಾಡುವನು || 75 ||

ಮುಕ್ತಾಮುಕ್ತರು ಕೂಡಿ ಅದರಿಂದ ಬೆರೆಸಿಹರು ಸಪ್ತ ಪ್ರಾಕಾರಂಗಳೊಳಗೆ |
ಚಿತ್ರ ಚಾವಡಿಯೊಳು ಅಲ್ಲಿದ್ದ ಹರಿಗೆ ಅಮುಕ್ತ ಸುರರು ಬಿನ್ನೈಸುವರು || 76 ||

ಪ್ರಧಾನ ಪರಮವ್ಯೋಮ್ನೋರನ್ತರಾ ವಿರಜಾನದೀ ।
ದೇವಾಙ್ಗ ಸ್ವೇದ ಜನಿತ ತೋಯೈಃ ಪ್ರಸ್ರವಿತಾ ಶುಭಾ ।
ಶ್ರೇಯೋ ಮೋಕ್ಷ ಪದಂ ದಿವ್ಯಮಮೃತಂ ವಿಷ್ಣುಮನ್ದಿರಮ್ ।
ಅಕ್ಷರಂ ಪರಮಂ ಧಾಮ ವೈಕುಣ್ಠಂ ಶಾಶ್ವತಂ ಪದಂ ।
ನಿತ್ಯಂ ಚ ಪರಮಂ ವ್ಯೋಮ ಸರ್ವೋತ್ಕೃಷ್ಟಂ ಸನಾತನಂ ।
ಪರ್ಯಾಯ ವಾಚಕಸ್ತಸ್ಯ ಪರನ್ಧಾಮ್ನೋಽಚ್ಯುತ ಸ್ಯ ಚ ॥

ಮುಕ್ತರ್ಗೆ ಮನೆಯಾದ ಹರಿಯ ಅಂತಃ ಪುರದ ಸುತ್ತಲಿಪ್ಪುದು ವಿರಜಾನದಿಯು ।
ತತ್ತ್ವಜ್ಞಾನಿಗಳು ಅದರೊಳು ಮುಳುಗೆ ನಿರ್ಮುಕ್ತವಾಹೋದು ಲಿಂಗದೇಹ ॥ 77 ॥

ಸಪ್ತಮದ್ವಾರಪರ್ಯಂತ ಬಂಧಕ ಮಾಯೆ ಮತ್ತೆ ಮುಕ್ತರಿಪ್ಪ ಹರಿಯ ।
ಉತ್ತಮಾಂತಃ ಪುರವಿಂತೆರಡರ ನಡುವೆ ಸುತ್ತಲಿಪ್ಪುದು ವಿರಜಾನದಿಯು ॥ 78 ॥

ಏಳನೆ ಬಾಗಿಲೊಳಿದ್ದ ಜಯ ವಿಜಯರು ಭೂಲೋಕದಲ್ಲಿ ಪುಟ್ಟಿದರಾಗಿ ।
ಕಾಲನ ಭಯವೀವ ಪ್ರಕೃತಿ ಆಪರಿಯಂತ ಕಾಲೂರಿ ಜನರ ಕಟ್ಟುವಳು ॥ 79 ॥

ಅದರಿಂದೊಳಗೆ ಮುಕ್ತರ್ ಪೋಗುವರಲ್ಲದೆ ಮಿಕ್ಕ ಬುಧರಿಗೆ ಸಂಚಾರ ಸಲ್ಲ ।
ಅದುಕಾರಣ ನಾರಾಯಣನೆ ಬಂದಲ್ಲಿಗೆ ಮುದವಿತ್ತ ಸನಕಾದಿಗಳಿಗೆ ॥ 80 ॥

ಹರಿಯಂತರ್ನಗರಿಗೆ ಪರಮವ್ಯೋಮ ನಾಮ ಹೊರಗಿದ್ದ ಪ್ರಕೃತಿ ಪ್ರಧಾನ ।
ಪುರಾಣವದರಿಂದ ಪ್ರಧಾನ ಪರಮವ್ಯೋಮಾಂತರದಿ ವಿರಜೆಯೊಂದೊರೆದವು ॥ 81 ॥

ಹರಿಯಂಗದೊಳಗಿದ್ದ ಬೆವರುದಕವಾಗಿ ಸಿರಿ ದೇವಿ ತಾನೇ ಪೊರಮಟ್ಟು ।
ಪರಿವಳು ರಜಶಬ್ದ ಸೂಚಿತ ಗುಣತ್ರಯ ವಿರದಕಾರಣ ವಿರಜೆ ಎನಿಪಳು ॥ 82 ॥

ಲೆಕ್ಕವಿಲ್ಲದ ಮುಕ್ತಿಯೋಗ್ಯ ಜೀವರನು ಮುಸುಕ್ಕಿರ್ದ ಪ್ರಕೃತಿಯ ಕೆಡಿಸುವ ।
ಶಕ್ತಿಯ ವ್ಯಕ್ತಿಗೆ ಹರಿಯಂಗ ಸಂಗದುದಕ್ಕವಾದಳು ಲಕ್ಷ್ಮೀದೇವಿ ॥ 83 ॥

ವಿರಜೆಯೊಳಗಣ ಪಟ್ಟಣದೊಳು ಮುಕ್ತರು ವಿರಿಞ್ಚಾದಿ ಸುರರು ಮಾನವರು ।
ತರು ಪಕ್ಷಿ ಮೊದಲಾದ ನಾನಾ ಜಾತಿಯರಿಹರಿವರ ಪ್ರಭೆ ತಮಕಿಂಬುಕೊಡದು ॥ 84 ॥

ಜಾತಿ ಹೀನರೆಂದು ನಿರಾಕರಿಸದಿರಿ ಶ್ರೀ ಪತಿ ಮತ್ಸ್ಯ ಕೂರ್ಮದಾಕೃತಿಯಿಂ
ಖ್ಯಾತನಾಗಿರನೆ? ಬಲ್ಲವರು ಆರೂಪಗಳ ಓತು ಮನ್ನಿಸಿ ತುತಿಸುವರು || 85 ||

ಬೆಲ್ಲದಚ್ಚಿನಿಂದ ಮಾಡಿದ ಕಾಸರು ಸಲ್ಲದೆ ಬಲ್ಲ ಬುಧರಿಗೆ |
ಕಲ್ಲೆಂದು ಬಿಸುಡುವರೆ ಮಾಣಿಕ ರತ್ನವ ಅಲ್ಲಿರ್ದ ಜಾತಿ ಶೋಭನವು || 86 ||

ಉರಗ ಗರುಡ ಹಂಸ ಮಹಿಷ ಮೇಷ ವೃಷಭ ಕರಿ ಮಕರ ತುರಗಗಳು |
ಸುರರಿಂದ ಮನ್ನಿಸಿಕೊಳವೆ ? ಶ್ಯಾಮಶಬಲರನು ನರರಿಲ್ಲಿ ನಿರುತ ಪೂಜಿಸರೆ || 87 ||

ಉತ್ತರ ಲೋಕದ ನಾನಾ ಜಾತಿಗಳಿಗೆ ಉತ್ತಮತೆಯು ತಪ್ಪದೆನಲು |
ಚಿತ್ತಿನ ಪುತ್ತಳಿಯಾಗಿ ಮುಕ್ತಿಯೊಳಿರ್ದ ಚಿತ್ರಜಾತಿಗಳೇಂ ಬಣ್ಣಿಸುವೆನು || 88 ||

ಯತ್ರ ಬ್ರಹ್ಮಾ ಪವಮಾನ ಛಂದಸ್ಯಾಂ ವಾಚಂ ವದನ್ನಿತ್ಯಾದಿ ವೇದವೆ |
ಮುಕ್ತಿಯಲ್ಲಿಪ್ಪ ಬ್ರಹ್ಮಾದಿ ಜೀವರ ವರ್ತನೆಯನು ವರ್ಣಿಸುತಿದೆಕೊ || 89 ||

ಹರಿಪುರದೊಳಿಪ್ಪ ಸಕಲ ಮುಕ್ತರುಗಳ ಇರವ ಬಣ್ಣಿಸಿ ಪೊಗಳುವ |
ಸರ್ವೇನಂದಂತೀತ್ಯಾದಿ ಶ್ರುತ್ಯರ್ಥವ ಒರೆವೆನು ಕೇಳಿ ಸಜ್ಜನರು || 90 ||

ಹೃದಯದ ಪಾಪವ ತೊಳೆವ, ಅನ್ನವನೀವ ಪದುಮನಾಭನೆ ಮುಕ್ತರುಗಳ |
ಕುದುರೆಯಂತೆ ಕುಣಿವ ಕಣ್ಗೆ ಗೋಚರನಾಗಿ ಒದಗಿಸಿ ಕೊಡುವ ಸಖಂಗಳನು || 91 ||

ಅಲ್ಲಲ್ಲಿ ಪಾಡುವ ಮುಕ್ತರ ಸಭೆಗಳ ಉಲ್ಲಾಸವ ತಾ ಕಂಡು ತಿಳಿವ |
ಬಲ್ಲಿದ ಯಶಸುಳ್ಳ ಹರಿಯೆಂಬ ಸಖನಿಂದ ಎಲ್ಲ ಮುಕ್ತರು ಸುಖಿಸುವರು || 92 ||

ಒಬ್ಬ ಬ್ರಹ್ಮನು ಋಗ್ ವಾಕ್ಯ ಪೋಷಿಸುವ ಗಡ ಒಬ್ಬ ಗಾಯತ್ರ ಸಾಮವನು |
ಉಬ್ಬಿದ ಮನದಿಂದ ಗಾನ ಮಾಡುವ ಮತ್ತೊಬ್ಬ ಬ್ರಹ್ಮನು ಪುರಾಣಗಳ || 93 ||

ಅಬ್ಜನಾಭನ ಪುರದಿ ಓದುತಿಪ್ಪನು ಗಡ ಮತ್ತೊಬ್ಬ ಶ್ರೀ ಹರಿಯ ಮೂರ್ತಿಯನೆ |
ಅಬ್ಬರದಿ ನೆನೆದು ಸುಖಿಸುವನು ಗಡ ಒಬ್ಬ ಬ್ರಹ್ಮನು ಸೋಮರಸವ || 94 ||

ಅಬ್ಜನಾಭನಿಗಗ್ನಿ ಮುಖದಿ ಕೊಡುವ ಗಡ ಮತ್ತೊಬ್ಬ ಬ್ರಹ್ಮನು ಪೂಜಿಸುವನು |
ಸರ್ಬದೇವರುಗಳೀ ಪರಿಯಲ್ಲಿ ಹರಿಯ ಗರ್ಭವಾಸದಲ್ಲಿ ಇಹರು || 95 ||

ಇಂತನಂತ ಬ್ರಹ್ಮಾದ್ಯರು ವೈಕುಂಠದಲ್ಲಿ ಅಂತರಂತರದಲಿಹರೆಂದು |
ಮಂತ್ರಗಳೇ ಕೊಂಡಾಡುತಲಿವೆಯದರಿಂದ ಶ್ರೀಕಾಂತನ ಮಹಿಮೆಗೇನೆಂಬೆ || 96 ||

ಮನೋಜವೇಷ್ವಸಮಾ ಬಭೂವು ಎಂದು ಚಿನುಮಯರಾದ ಮುಕ್ತರಿಗೂ |
ಅನುಭವಿಸುವ ಆನಂದಾದಿ ತಾರತಮ್ಯವನು ಶ್ರುತಿ ತಾನೆ ಪೇಳಿತಲ್ಲ || 97 ||

ಅದರಿಂದ ಬೊಮ್ಮಪಟ್ಟದವರೆಲ್ಲರೊಳು ಮೊದಲಿಗರೆಂದವರ ಛಂದ |
ಪದವಿಯ ಬೇರೆ ಕೊಂಡಾಡಿತು ಶ್ರುತಿ ಮತ್ತುಳಿದವರನೊಂದಾಗಿ ತುತಿಸಿತು || 98 ||

ಹರಿಯರಮನೆಯ ಓಲಗ ಶಾಲೆಗೈತಪ್ಪ ವಿರಿಂಚರಾಶಿಗೆ ಲೆಕ್ಕವಿಲ್ಲ|
ತೆರತೆರದಲ್ಲಿ ಬಪ್ಪ ಗರುಡೇಂದ್ರ ಚಂದ್ರಾದಿ ಸುರರ ತಿಂತಿಣಿಯನೇನೆಂಬೆ || 99 ||

ಪುಟ್ಟ ಮುನಿಯ ಪೊಟ್ಟೆಯಂಬುಧಿ ಜಲಕಿಂಬು ಕೊಟ್ಟಿತೆನಲು ಸರ್ವೇಶ್ವರನ |
ಪಟ್ಟದರಮನೆಯ ಚಾವಡಿ ಬಂದ ಬಂದಷ್ಟು ಮುಕ್ತರ್ಗಿಂಬು ಕೊಡದೆ ? || 100 ||

ಒಂದೊಂದು ಕಲ್ಪದಿ ಮುಕ್ತರಾದಮರರು ಚಂದ ಚಂದದಲ್ಲಲ್ಲಿಹರು |
ಇಂದಿರೆಯೋಲಗದಿ ವಾಣಿ ಮೊದಲಾದ ಇಂದುಮುಖಿಯರೊಪ್ಪಿಹರು || 101 ||

ಅವರ ಲಾವಣ್ಯವ ಅವರ ತಾರುಣ್ಯವ ಅವರುಟ್ಟ ಚಿತ್ರಾಂಬರವ |
ಅವರ ಸರ್ವಾಂಗ ದಿವ್ಯಾಭರಣಂಗಳ ವಿವರವನಾವ ಬಣ್ಣಿಸುವ ? || 102 ||

ಇಟ್ಟ ಮುಕುಟಂಗಳ ತೊಟ್ಟ ಅಂಗಿಗಳ ವಟ್ಟ ಸರ ಹಾರ ಪದಕಗಳ |
ಉಟ್ಟ ಪೊಂಬಟ್ಟೆಗಳ ಕಂಕಣಾಂಗದಗಳ ಮೆಟ್ಟಿದ ಪೊನ್ನ ಪಾವುಗೆಯ || 103 ||

ಪೊಳೆವ ಕುಂಡಲಗಳ ಉಲಿವ ಕಿಂಕಿಣಿಗಳ ನಳನಳಿಸುವ ನೇವಳಗಳ |
ನಲಿವಂದುಗೆಗಳ ಮುಕ್ತರ ದಿವ್ಯಾಂಗದ ಚೆಲುವನದಾವ ಬಣ್ಣಿಸುವ? || 104 ||

ಕರ ಚತುಷ್ಟಯದ ಮುಕ್ತರು ಕೃಷ್ಣನೊಡನಲ್ಲಿ ಸರಿ ಬೆರೆಸಿಹ ಸಮಯದಲ್ಲಿ |
ಉರದಿ ಶ್ರೀವತ್ಸ ಕೌಸ್ತುಭದ ಕುರುಹ ಕಂಡು ಹರಿ ಇವನೆಂದರಿವರು ಗಡ || 105 ||

ವಿರಿಂಚ ಕೈಮುಗಿಯಲು ಗರುಡನೇರಿ ಬರಲು ಉರಗನ ಮಂಚದಲ್ಲಿರಲು |
ಅರಿವರಲ್ಲದಿರೆ ಸಾರೂಪ್ಯದಿ ಮುಕ್ತಿ ತೆರೆ ಪಡಿ ನೋಡಲರಿಯದು ಗಡ || 106 ||

ಸಾಯುಜ್ಯ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಈ ಯಂದ ಚತುರ್ವಿಧ ಮುಕ್ತಿಯೊಳು |
ಹೇಯಲಿಂಗ ದೇಹ ಪೊದ ಮೇಲವರವರ ಸ್ವಯೋಗ್ಯತೆಯಿಂದೊಪ್ಪುವರು ಗಡ || 107 ||

ಶ್ರೀಕಾಂತನಂಗವ ಮುಟ್ಟಿಕೊಂಡಿಪ್ಪುದೆ ಬೇಕಾದ ಸಾಯುಜ್ಯ ಮುಕ್ತಿ |
ಈ ಕುಜನರೆಂಬೈಕ್ಯವ ಯುಜಿರ್ ಯೋಗೇ ಎಂಬ ವ್ಯಾಕರಣೋಕ್ತಿ ಬಿಡಿಸಿತಲ್ಲ || 108 ||

ಹರಿಯಂಗವಾಶ್ರೈಸಿ ಇಲ್ಲಿಪ್ಪದೇವರು ಪರಗತಿಯಾದ ಮೇಲೆ ಮುಕ್ತಿಯೊಳು |
ತೆರತೆರದಲ್ಲಿ ಹರಿಮೂರ್ತಿಯಲಿಹರಾಗೀ ಪರಿ ಸುರರೇ ಸಾಯುಜ್ಯಾರ್ಹರು || 109 ||

ಇದ್ದ ಮುಕ್ತಿಗಳಲ್ಲಿ ಭೇದ ಉಂಟೆಂಬುದು ಸಿದ್ಧ ಸಕಲ ವಾದಿಗಳಿಗೂ |
ಶಬ್ದ ಶಕ್ತಿಯಿಂದ ಭೇದ ಬಂದಿತಾಗಿ ಬಿದ್ದು ಹೋಯಿತು ಪರಸಿದ್ಧಾಂತ || 110 ||

ಸಾಲೋಕ್ಯ ಹರಿಯ ಲೋಕದೊಳಗಿಪ್ಪುದು ಆ ಲೋಕದ ಹತ್ತಿರ ಸುತ್ತ ಮುತ್ತ |
ಪಾಲಸಾಗರದಲ್ಲಿ ಸುಖಿಸುವ ಜೀವರ ಪಾಲಿಗೆ ಸಾಮೀಪ್ಯ ಮುಕ್ತಿ ಕಾಣಿರೋ || 111 ||

ಶ್ರೀವತ್ಸ ಕೌಸ್ತುಭ ಹೊರತಾಗಿ ಹರಿಯಂತೆ ಆವಾಗ ಕರಚತುಷ್ಟಯದಲ್ಲಿ |
ಪಾವನ ಶಂಖಚಕ್ರಾದಿಗಳ ಧರಿಸಿಹ ಜೀವರಿಗೆ ಸಾರೂಪ್ಯ ಸಿರಿ ಕಾಣಿರೋ || 112 ||

ಸಾರೂಪ್ಯವೆಂಬೋದು ಸಕಲರಿಗೂಸರಿಯೆಂದು ಮೂರು ಮುಕುತಿಯಿಂದ್ಹೊರಗಿಪ್ಪರು |
ಸಾರೂಪ್ಯ ಮುಕ್ತರೆಂದು ಪಿರಿಯರು ಕರೆವರು ಬೇರೆ ಬೇರವರಿಗಿರವು ಗಡ || 113 ||

ಮೂರು ಶಾಕವ ಮಾಡಿ ಲವಣಕೂಡಿಸಿದರು ಮೂರು ಶಾಕವೆಂದೆ ಕರೆವರೈಸೆ |
ಬೇರೆ ಬಡಿಸಿದ ಲವಣ ಲವಣವೆಂದೆನಿಪುದು ಈ ರೀತಿಯಹುದು ಸಾರೂಪ್ಯ || 114 ||

ಶ್ರೀಲೋಲನಾಜ್ಞೆಯಿಂದ ಸತ್ಯಾದಿಲೋಕಗಳಲಿ ನೆಲೆಸಿರ್ದ ಸಾರೂಪ್ಯ ಮುಕ್ತರಿಗು ।
ಆಲಸ್ಯ ಹಸಿತೃಷೆ ಕಾಲ ಕರ್ಮದ ಕೋಟಲೆಗಳು ತುಡುಕಲಮ್ಮವು ಗಡ ॥ 115 ॥

ದಿವ್ಯ ಭೋಗಂಗಳ ಲೀಲೆಯಿಂದುಂಬವರು ದಿವ್ಯ ಗೀತಗಳ ಪಾಡುವರು ।
ದಿವ್ಯ ಗಂಧ ಪರಿಮಳಗಳ ಪೂಸುವರು ದಿವ್ಯ ನರನಾರಿಯರಲ್ಲಿ ॥ 116 ॥

ಜ್ಯೋತಿರ್ಮಯವಾದ ಹೆಣ್ಣುಗಂಡುಗಳು ಪ್ರಾಕೃತದೇಹಂಗಳಲ್ಲಿಹವು ।
ಪ್ರೀತಿಯಿಂದೊಮ್ಮೊಮ್ಮೆ ಅದರೊಳು ಪೊಕ್ಕು ನಾನಾ ಕೃತಿಯಲ್ಲಿ ಸುಖಿಸುವರು ॥ 117 ॥

ಮುಕ್ತರ ಭೋಗಕ್ಕೆ ತಕ್ಕ ಫಲಂಗಳ ಹೊತ್ತು ಹೊತ್ತಿಲಿ ಕೊಡುತಿಪ್ಪ ।
ನಿತ್ಯಾ ಪ್ರಾಕೃತ ಚಿತ್ರ ವೃಕ್ಷಗಳಲ್ಲಿ ಸುತ್ತಮುತ್ತಲೊಪ್ಪಿಹವು ॥ 118 ॥

ನಿತ್ಯ ನಿರ್ದುಃಖ ಸುಖ ಸ್ವರೂಪರಾಗಿ ಸುತ್ತ ಸುಳಿವರು ಲೀಲೆಯಲ್ಲಿ ।
ನಿತ್ಯಾಪ್ರಾಕೃತ ಫಲಂಗಳವರ್ಗೆ ಸುಖವಿತ್ತು ಮುನ್ನಿನಂದದಲ್ಲಿಹವು ॥ 119 ॥

ಇದು ಚಿತ್ರವಲ್ಲ ತುಂಡಿಸಿ ಪಾಕಂಗಳ ಮಾಡಿ ಕುದಿಸಿ ವಿಪ್ರರಿಗುಣಿಸಿದ ।
ಚದುರ ವಾತಾಪಿ ತಮ್ಮಣ್ಣ ಕರೆದಾಗಲೆ ಮೊದಲ ಹಾಗೇ ಬಾಹ ಕಂಡ್ಯ ॥ 120 ॥

ಒಪ್ಪುವ ವಿಮಾನವನೇರಿ ಮೆರೆವ ಕಂದರ್ಪನ ಕೇಳಿಯಲ್ಲಿಹರು ।
ತಪ್ಪರು ಧರ್ಮಮಾರ್ಗವಧರ್ಮಕ್ಕೊಳಗಾಗದಿಪ್ಪುದವರ್ಗೆ ಸ್ವಭಾವ ॥ 121 ॥

ಚಿತ್ರದಿ ಬರೆದಿದ್ದ ಹೆಣ್ಣಗಣ್ಣಂತೆ ಅನ್ಯ ಸ್ತ್ರೀಯರಲಿ ಮುಕ್ತರಿಗೆ ।
ಚಿತ್ತವೆರಗದು ತಮ್ಮ ತಮ್ಮ ಸ್ತ್ರೀಯರೊಳರ್ಥಿಯ ಮಾಡುವ ರೈಸೆ ॥ 122 ॥

ತಾಯ ಸೊಬಗ ಮಕ್ಕಳು ಕಂಡಾಗ ನ್ಯಾಯ ಪಥವನವರ್ ಬಿಡುವರೆ ?
ಶ್ರೀಯಿಂದ ಮಿಂಚುವ ಮಗಳ ಕಂಡರೆ ಪಿತ ಕಾಯಜ ಶರಕ್ಕೊಳಗಹನೆ ॥ 123 ॥

ಚೆಲುವ ತಂಗಿಯ ಕಂಡರೊಡಹುಟ್ಟಿದವರ್ಮನವಳುಕದಿಹುದೆ ಪಾಪ ಪಥಕೆ ।
ಕಲಿಗೊಳಗಾದವರೀ ಮಾರ್ಗದಲ್ಲಿರೆ ನಿರ್ಮಲ ಮುಕ್ತರಿಗೆ ಮೋಸವಹುದೆ ? ॥ 124 ॥

ಆನನ್ದಾನ್ ಮನ್ದ ಮನ್ದಾ ದದತಿ ಹಿ ಮರುತಃ ಕುನ್ದಮನ್ದಾರ ನನ್ದ್ಯಾ।
ವರ್ತಾಮೋದಾನ್ ದಧಾನಾ ಮೃದುಪದಮುದಿತೋದ್ಗೀತಕೈಃ ಸುನ್ದರೀಣಾಮ್ ॥
ವೃನ್ದೈರಾವನ್ದ್ಯ ಮುಕ್ತೇನ್ದ್ವಹಿಮಗುಮದನಾಹೀನ್ದ್ರದೇವೇನ್ದ್ರ ಸೇವ್ಯೇ।
ಮೌಕುನ್ದೇ ಮನ್ದಿರೇಽಸ್ಮಿನ್ ಅವಿರತ ಮುದಯನ್ಮೋದಿನಾಂ ದೇವದೇವ ॥

ಕುಂದ ಮಂದರ ಮಲ್ಲಿಗೆ ನಂದ್ಯಾವರ್ತರವಿಂದಗಳೆಸೆವ ಸೌರಭದ।
ಗಂಧವಹನಲ್ಲಿ ಬೀಸಿ ಮುಕ್ತರಿಗೆ ನಿತ್ಯಾನಂದದ ಸುಖವೀವ ॥ 125 ॥

ಚಂದನರಸ ಪೂಸಿದವನ ಮೈಯಳು ಹೊಂದಿದ ಮೊದಲಿನ ಶೈತ್ಯವನೆ।
ಮಂದ ಮಾರುತ ಬಂದು ವ್ಯಕ್ತ ಮಾಡಿಸುವುದರಿಂದ ಮುಕ್ತರ ಭೋಗಗಳಿವೇ ॥ 126 ॥

ಮತ್ತ ನರ್ತನದಂತೆ ಶಕ್ತ ನೃಪಾಲಗೆ ಭೃತ್ಯನ ಕೈಲಾಗಿನಂತೆ।
ಮುಕ್ತರ ಭೋಗಂಗಳಿಪ್ಪವು ಹರಿಯ ಚಿತ್ರ ಚರಿತ್ರನ ಲೀಲೆಗಳು ॥ 127 ॥

ನಿತ್ಯತೃಪ್ತನು ಕೃತಕೃತ್ಯನಚ್ಯುತ ಗಡ ಮುಕ್ತರೆಲ್ಲಾಪ್ತ ಕಾಮರು ಗಡ।
ಇತ್ತ ಇವರಾಟವ ಅತ್ತ ಶ್ರುತಿಪಾಠವ ವ್ಯರ್ಥ ಮಾಡದವ ಜಾಣ ॥ 128 ॥

ಅದರಿಂದ ತಮ್ಮ ನಿತ್ಯಾನಂದ ತಪ್ಪದಂತೊದಗಿದ ವಿಷಯ ರಾಶಿಗಳ।
ಮದನನಯ್ಯನ ಪುರದಿ ನೆಲೆಸಿರ್ದ ಮುಕ್ತರು ಮುದದಿಂದ ವಿಷಯಸೇವಿಪರೈಸೆ॥ 129 ॥

ಆರವೆಂದು ಣ್ಯವೆಂದು ಅಲ್ಲಿ ಸುಧೆಸಾಗರ ಎರಡೆಂದೆಂದಿಪ್ಪವು ಗಡ।
ಸರಸಲೀಲೆಯಿಂದಲದರ ರಸವನು ಮುಕ್ತರು ಬಂದಾಸ್ವಾದಿಸುವರು ಗಡ ॥ 130 ॥

ಒಂದು ಅಶ್ವತ್ಥವು ಚಂದದಮೃತರಸ ಎಂದೆಂದು ಕರೆವುತಿಪ್ಪುದು ಗಡ।
ಬಂದದನೊಮ್ಮೊಮ್ಮೆ ಮುಕ್ತರು ತಮ್ಮ ಮನ ಬಂದಂತೆ ಸವಿಯುತಿಪ್ಪರು ಗಡ ॥ 131 ॥

ಶುದ್ಧಪ್ರಾಕೃತವಾದ ಷಡ್ವಿಧರಸವುಳ್ಳ ಸ್ವಾದ್ವನ್ನಗಳ ಕೊಡುತಿಪ್ಪ।
ಹೃದ್ಯನದಿಗಳು ಸುತ್ತ ಪರಿವುವು ಪದ್ಮನಾಭನ ಪುರದೊಳಗೆ ॥ 132 ॥

ಸರ್ಪಿಪಾಯಸವೆಂಬ ಕರ್ದಮಂಗಳು ಕೂಡಿ ಒಪ್ಪುವ ಭಕ್ಷ್ಯ ಭೋಜ್ಯಗಳು।
ತೋರ್ಪವಮೃತ ನದಿಗಳಲ್ಲಿ ಪರಿವುದನೊಪ್ಪುಗೊಂಬರು ಲೀಲೆಯಿಂದ ॥ 133 ॥

ವಾಪೀ ಕೂಪ ತಟಾಕಂಗಳಲ್ಲಿಹವು ನಾನಾ ಫಲವೆರಸಿದ ತರುಗಳು |
ತೋಪುಗಳಲ್ಲಿ ಒಮ್ಮೊಮೆ ಇವರು ನಾನಾ ಪರಿ ಕ್ರೀಡೆಯಾಡುವರು || 134 ||

ನಿತ್ಯಾಪ್ರಾಕೃತವಾದ ಚತುರ್ವಿಧಾನ್ನಂಗಳ ತುತ್ತನೊಮ್ಮೊಮ್ಮೆ ಸವಿವರು |
ಸತ್ತಿಗೆ ಪಿಡಿವರು ಚಾಮರಂಗಳನಲ್ಲಿ ಭೃತ್ಯರವರಿಗೆ ಬೀಸುವರು || 135 ||

ಮಕ್ಕಳೆತ್ತಿಕೊಂಬ ತಾಯಿ ಸುಖದಿಂದ ಉಕ್ಕುವಂತಲ್ಲಿ ಸೇವಿಪರು |
ಭಕ್ತಿಭರಿತ ಚಿತ್ತ ಉಬ್ಬಿಕೊಬ್ಬಿದರೆ ಸೌಖ್ಯಾಬ್ಧಿಯು ತುಳುಕುವುದೈಸೆ || 136 ||

ಪಾಲುಂಬ ಸುಖದಿಂದ ಸಕ್ಕರೆ ಗೂಡಿದ ಪಾಲ ಕುಡಿವ ಸುಖಮೇಲು |
ಲೋಲಾಕ್ಷಿಯರ ನೋಳ್ಪ ಸುಖದಿಂದ ಮತ್ತವರಂಗದಾಲಿಂಗನದ ಸುಖ ಮೇಲು || 137 ||

ಇಂತು ಮಹಂತರ ಸುಖ ಮೇಲು ಮುಕ್ತಿಯಳಂತರಂತರದಿ ಸೇವಿಪರ |
ಸಂತೋಷ ತಾರತಮ್ಯದಲಿಪ್ಪುದೆಂದು ವೇದಾಂತದಿ ಹಯವದನನೊರೆದ || 138 ||

ವೈಕುಂಠವೆಂದೆಂಬ ಪುರದ ಕಥೆಯ ಪರಾಕುವಿಟ್ಟು ಕೇಳ್ವಜನರ |
ಶ್ರೀಕಾಂತ ಕಾವನೆಂಬಲ್ಲಿ ಮೊದಲ ಸಂಧಿ ಈ ಕಾವ್ಯದೊಳಗೆ ಮುಗಿಯಿತು || 193 ||

ಶ್ರೀಧರ ಹಯವದನ ರಾಯನ ದಯದಿಂದ ವಾದಿರಾಜೇಂದ್ರ ರಚಿಸಿದ |
ಈ ದಿವ್ಯಕಾವ್ಯದಿ ಮುಕ್ತಿಯೊರೆವ ರಮ್ಯವಾದ ಮೊದಲ ಸಂಧಿ ಪೋಸಗೆ || 140 ||

## || ಲಯಸಂಧಿ ||

ಇದು ಪುಣ್ಯಕಥೆ ಲೋಕಕ್ಕಿದೆ ಮುಕುತಿಯ ಪಥ ಇದ ಕೇಳುವವನೆ ಕೃತಾರ್ಥ |
ಇದು ಸರ್ವಸಾಧನ ವಿದುಗಳಿಗೆ ಸಮ್ಮತ ಮುದವನೀವುದು ಕೇಳ್ವಜನಕೆ ||

ಸ ಏವ ಭೂಯೋ ನಿಜವೀರ್ಯಚೋದಿತಾಂ ಸ್ವಜೀವಮಾಯಾಂ ಪ್ರಕೃತಿಂ ಸಿಸೃಕ್ಷತೀಂ |
ಅನಾಮರೂಪಾತ್ಮನಿ ರೂಪನಾಮನೀ ವಿಧಿತ್ಸಮಾನೋಽನುಸಸಾರ ಶಾಸ್ತ್ರಿಕೃತ್ ||

ಜೀವರ ದೇಹರೂಪದಿಂದ ಕಟ್ಟಿತಾಗಿ ಜೀವ ಮಾಯೆ ಗಡ ಪ್ರಕೃತಿ |
ದೇವನು ನಿಜಶಕ್ತಿಯಿಂದ ಕರದ ತಂತುವಿನಂತಿದ್ದು ನಡೆಸುವ ಗಡ || 1 ||

ಸೃಷ್ಟಿಸಿ ನಾರಾಯಣ ಬೊಮ್ಮಾದಿಳ ಉತ್ಕೃಷ್ಟ ಸತ್ಯಾದಿ ಲೋಕದಲ್ಲಿ |
ಪಟ್ಟವ ಕಟ್ಟಿ ಸಕಲರಿಗಿಷ್ಟವ ಕೊಟ್ಟು ಪಾಲಿಸಿದ ಲೀಲೆಯಲಿ || 2 ||

ಅವತರಿಸಿ ಭೂಮಿಯ ಭಾರವನಿಳುಹಿದ ಭುವನ ಪಾವನ ಪುಣ್ಯ ಚರಿತ |
ತವೆಯಾದ ಸುಖಗಳ ತನ್ನವರಿಗೆ ಕೊಟ್ಟು ಜವನ ಬಾಧೆಗಳ ಬಿಡಿಸಿದ || 3 ||

ಭಕ್ತರ ಪೊರೆದ ದೈತ್ಯರ ಮುರಿದ ಸರ್ವತ್ರ ಶ್ರುತಿಪಥವನೊರೆದ |
ಹಸ್ತೇಂದ್ರವರದ ದುರಿತರಾಶಿಯ ತರಿದ ಕೀರ್ತಿಯಿಂದ ಮೆರೆದಿಷ್ಟವ ಗರೆದ || 4 ||

ಹಳೆಯಂಗಿಗಳ ಕಳೆದು ಚೆಲುವ ಚೀನಾಂಬರದ ಹೊಳೆವಂಗಿಗಳ ತೊಡುವಂತೆ |
ಜಲಜಾಕ್ಷ ಮಾಡುವ ಲಯದ ಲೀಲೆಯ ಮುಕ್ತಿ ಫಲವೀವುದರಿಂ ಬಣ್ಣಿಪೆನು || 5 ||

ಜಗವ ಪಾಲಿಸಿ ಮತ್ತೀ ಜಗದೀಶ ಜೀವರ್ಗೆ ಬಗೆಬಗೆಯ ಗತಿಗಳ ಕೊಡಲು |
ಮಗನ ನೂರು ವರುಷ ಮುಗಿಯಲು ಮುನಿದಂತೆ ಭಗವಾನ್ ಲಯಕೆ ಮನವಿತ್ತ || 6 ||

ಪಾತಾಳ ಮೊದಲಾದ ಲೋಕಂಗಳೆಲ್ಲ ವಾತಸಖನಿಂದಲೆ ಸುಡಿಸಿ |
ಭೂತಪಂಚಕ ಮೊದಲಾದ ತತ್ವಂಗಳ ಶ್ರೀನಾಥ ಸಂಹರಿಸಿದಾ ಕ್ಷಣದಿ || 7 ||

ಮೂರುಗುಣಂಗಳ ಮೂಲ ಪ್ರಕೃತಿಯಲ್ಲಿ ಸೇರಿಸಿ ಸರ್ವಜೀವರನು |
ಕಾರಣ ಪುರುಷ ತನ್ನ ಕುಕ್ಷಿಯಳಗಿಟ್ಟು ಶ್ರೀರಮಣಿಗೆ ಸುಖವಿತ್ತ || 8 ||

ಅತ್ತ ಮಹತ್ತತ್ವವಾಳ್ವ ದೇಹವಿರಲು ಚಿತ್ರ ಜೀವರ ಮೊತ್ತಗಳನು |
ಪೊತ್ತಿಹ ಸತ್ಯಲೋಕದ ಬೊಮ್ಮ ವಿರಜೆಯ ತೀರ್ಥಸ್ನಾನಕೆ ಸಲ್ಲನಲ್ಲ || 9 ||

ಅದರಿಂದ ಇಪ್ಪತ್ತಮೂರು ತತ್ವಂಗಳ ಅಧಿಪತಿಗಳ ಕೂಡಿಕೊಂಡು |
ಮೊದಲ ತತ್ವವ ತನ್ನ ಮೂಲರೂಪದಿ ಕೂಡಿ ಮದನನಯ್ಯಗೆ ತುತ್ತನಿತ್ತ || 10 ||

ಹಿಂದೆ ಬೊಮ್ಮನ ಸೃಜಿಸಿ ಅವನಂಗವಾಗಲೆ ತಿಂದರೆ ತುತ್ತು ಕುಂದುವುದು |
ಎಂದುದಾಸೀನವ ಮಾಡಿದ ಶ್ರೀಕೃಷ್ಣ ಇಂದು ಭುಂಜಿಸಿ ತೇಗುತಿರ್ದ || 11 ||

ಸಪ್ತ ದ್ವೀಪಗಳಲ್ಲಿ ಸುತ್ತಮುತ್ತಲಿಹ ಭಕ್ತರಾಶಿಗೆ ಲೆಕ್ಕವಿಲ್ಲ |
ಅರ್ತಿಯ ಭಕ್ಷ್ಯಕ್ಕೆ ತಕ್ಕ ಧಾನ್ಯಂಗಳ ಮೊತ್ತ ಪರ್ವತವ ತಂದಿತ್ತ || 12 ||

ನಾನಾ ಫಲಂಗಳು ನಾನಾ ಭಕ್ಷ್ಯಂಗಳು ನಾನಾ ವಿಧದ ಶಾಕಂಗಳು |
ನಾನಾ ಕಂದ ಮೂಲ ಫಲಂಗಳು ಶ್ರೀ ಕೃಷ್ಣನ ಆನಂದಕೆಂದೊದಗಿದವು || 13 ||

ಹೆಡೆತಲೆಯ ಮೃತ್ಯುವೆ ಅಡಿಗಡಿಗೆ ತುಪ್ಪವಾಯಿ ತೊಡಲೊಂದೊಂದೆಂಬುದೇ ತುತ್ತುಗಳಾದುವು |
ಬಡತನವಿಲ್ಲದ ಜಗದೊಡೆಯನಿಗಿಂತು ಮಾರೆಡೆ ಬಡಿಸಿದಂತೆ ಭುಂಜಿಸುವ ಗಡ || 14 ||

ಮಧು ಕೈಟಭರೆಂಬ ಕೊಬ್ಬಿದ ದಾನವರ ಮೈಯೊಳ್ ಹುದುಗಿಪ್ಪ ರೂಪ ರಸ ಗಂಧ ಭರಿತ |
ಮೇದದಿಂ ಮಾಡಿದ ಈ ಮೇದಿನಿ ಶ್ರೀಧರಗೆ ಸ್ವಾದುವಾದ ಮಾಂಸವಾಯ್ತು || 15 ||

ಏಳು ಕೋಟಿ ಯೋಜನ ಪ್ರಮಾಣದಿ ಬೆಳೆದು ತನ್ನೊಳಗೆ ನಾನಾವಿಧ ಪ್ರಾಣಿಗಳ ತುಂಬಿರ್ದ |
ಕಲಿ ಮಲ ಕಳೆವ ಇಳೆಯೆ ನಮ್ಮಚ್ಯುತಗೆ ಪೊಳೆವ ಪುಣ್ಯಾಮಿಷವಾಯಿತು ಕಾಣಿರೊ || 16 ||

ದೇವ ಪೂರ್ವದೇವ ಉಪದೇವ ಭೂಮಿದೇವ ಧನವೀವ ರಾಯದೇವ ಮೊದಲಾದ ಜೀವರ |
ಪಾವನವಾದ ವ್ಯಾಧಿಯಿಲ್ಲದ ದೇಹಗಳೇ ಭಾವನೆಕೊಟ್ಟಂತೆ ಭವ್ಯಾಮಿಷವಾಯ್ತು || 17 ||

ಏಳು ಸಾಗರದೊಳಗೆ ತುಂಬಿದ್ದ ಜಲಚರ ಜಾಲಂಗಳಿಗೆ ಲೆಕ್ಕವಿಲ್ಲ |
ಸಾಲಾಗಿ ವನವನದಿ ಸಂಚರಿಸುವ ಮೃಗ ಪ್ಯಾಳೋರಗಗಳಾರು ಬಣ್ಣಿಪರು || 18 ||

ಆದಿ ಪುರುಷನಿಂತು ತನ್ನ ಭೋಜನಕೆ ಸಾಧನವಾದ ದ್ರವ್ಯಗಳ |
ಶ್ರೀ ದೇವಿ ತಾನೆ ಸ್ವಯಂ ಪಾಕಿಯಳಂತೆ ಆ ಲಯ ಜ್ವಾಲೆ ಕಿಚ್ಚಿನಲಿ || 19 ||

ಲವಣೇಕ್ಷು ಮಧು ಸರ್ಪಿದಧಿಕ್ಷೀರಗಳ ರಸವ ಕೂಡಿ ಹೈಮಾಂಡವೆಂಬ |
ತವೆಯಾದ ಭಾಂಡದೊಳಿಟ್ಟು ಪಾಕವ ಮಾಡೆ ತವಕದಿಂದೊಂದೊಂದುತುತ್ತಿನಲಿ || 20||

ಭುವನವ್ಯಾಪ್ತವಾದ ಸ್ಥೂಲ ದೇಹದ ಬಾಯ ವಿವರವ ತೆರೆದು ಭುಂಜಿಸಿದ |
ಪವನ ತನ್ನಯ್ಯನುಂಬ ಸಂಭ್ರಮಕೆ ಮೈ ಬೆವರದಂತೆ ಅಡಿಗಡಿಗೆ ಬೀಸೆ || 21 ||

ನವ ಶುದ್ಧಾರ್ಣವ ಜನವೆಂಬ ಪಾನೀಯವ ಕೊಂಡಾಚಮನವ ಮಾಡಿ |
ಇವು ಜೀರ್ಣವಪ್ಪಂತೆ ಸ್ವರ್ಣದಜಾಂಡವನೆ ಭಸ್ಮವ ಮಾಡಿ ಮತ್ತೆ ಸೇವಿಸಿ || 22 ||

ಕುದಿವ ಬಾಹ್ಯೋದಕವೆಂಬ ಕಷಾಯವ ಮುದದಿಂದ ಕೊಂಡು ತೇಗುತಲಿ |
ಪದುಮೆಯೊಡನೆ ಇನ್ನು ಪವಡಿಸ ಬೇಕೆಂದು ಬುಧಜನ ಬಂಧು ಬಯಸಿದ || 23 ||

ಒಂದೊಂದು ನಿಮಿಷದಿ ಅಂದದುಂಡು ತೇಗಿ ಎಂದಿನಂತಿಪ್ಪ ಮುಕುಂದನೆತ್ತ |
ಎಂದಿಷ್ಟನ್ನಧಿಕವಾದರೆ ನೊಂದ ತಲೆ ಸುತ್ತಿದಂದುಗವನುಂಬ ಜೀವವೃಂದ ವೆತ್ತ || 24 ||

ಇದೇ ರೀತಿ ರಕ್ಷಕತ್ವ ಶಿಕ್ಷಕತ್ವ ಮೋಕ್ಷದಾತೃತ್ವಾದಿ ಗುಣಗಣ ಒಂದೊಂದೇ |
ಪದುಮನಾಭನಲನಂತವಾಗಿಪ್ಪುದೊಂದು ಅದುಭುತವಲ್ಲವೆ ನಮ್ಮನಿಯನಾಟ
ಖಳರೆದೆಯ ಗೂಟ ಇವ ಮಾಡುವ ಮಾಟ || 26 ||

ಏನೇ ಹರಿಣಾಕ್ಷಿ ಮೋಹನೆ ಗಜಗಮನೆ ಧ್ಯಾನವ್ಯಾತಕೆ ನಿನಗೆಂದ |
ಶ್ರೀನಾಥ ಸತಿಯ ಮೂಗನೋಡಿ ನಸುನಕ್ಕು ನಾನಾಪರಿಯಲ್ಲಿ ನುಡಿಸಿದ || 27 ||

ಒಪ್ಪುವಂಗಗಳೊಳು ತೋರ್ವ ಸುರರ ಹಿಂಡು ತಪ್ಪಿಸಿ ರಮೆ ಎಂತಪ್ಪುವಳು ?
ಕರ್ಪೂರ ಕರಡಿಗೆಯಂತಿಪ್ಪ ಬಾಯೊಳು ತನ್ನಪ್ಪನಿರಲೆಂತು ಚುಂಬಿಪಳು ? || 28 ||

ಅದರಿಂದ ತನ್ನ ಮೈಯೊಳಗಿದ್ದ ದೇವರ ಉದರದಿ ಕೃಷ್ಣ ಬಚ್ಚಿಡಲು |
ಉದಧಿ ಕನ್ನಿಕೆ ತನ್ನ ರತಿಗನುವಾಗೆ ನೇಹದ ಬಗೆಗೆ ಮನದಲುಬ್ಬಿದಳು || 29 ||

ಸರಸಿಜಾಸನನಾಗ ವೈಕುಂಠದೊಳಗಿರ್ದ ವಿರಜೆಯಲ್ಲಿ ಮುಕ್ತಿಯೋಗ್ಯರನು |
ಕರಸಿಕೊಂಡು ಬಂದು ಮಿಂದು ಮುಕ್ತನಾಗಿ ಹರಿಯುದರವ ಬೇಗ ಪೊಕ್ಕ || 30 ||

ತರತರದಿ ಮಿಂಚುವ ತಮ್ಮ ದೇಹಂಗಳ ಸಿರಿಯ ಸೇರಿಸಿ ಸಿರಿವರನ |
ಪುರ ಮೂರರೊಳಗಿದ್ದ ಮುಕ್ತರು ಬಂದು ಶ್ರೀಹರಿಯುದರವ ಪೊಕ್ಕರಾಗ || 31 ||

ಎಲ್ಲ ಜೀವರ ತನ್ನ ಕುಕ್ಷಿಯೊಳಗಿಟ್ಟು ಶ್ರೀವಲ್ಲಭ ನಿದ್ದೆಗೊಳಿಸಿದ |
ಸಲ್ಲೀಲೆಯಿಂದಲಿ ಸತಿಯೊಡನಾಡುವ ಉಲ್ಲಾಸಗಳ ಕಾಣದಂತೆ || 32 ||

ಇಂತು ಮುಕ್ತಾಮುಕ್ತ ದೇವರು ತಿಂತಿಣಿಯನಾಂತು ಶ್ರೀಕಾಂತ ಪವಡಿಸಿದ |
ಕಾಂತೆಯರೊಡನೆ ಸಂತೋಷದಲ್ಲಿಹ ಕಥೆ ಸಂತತ ನಮ್ಮ ಸಲಹಲಿ || 33 ||

ಶ್ರೀದೇವಿ ತಾನೆ ತ್ರಿಧಾಮನ ಮನೆಯಾಗಿ ಆದ್ಯಂತಗಳಿಲ್ಲದಂತೆ ಬೋಧ
ಸುಖರೂಪಳಾಗಿಹಳೆಂದು ಪೂರ್ವದ ವೇದಗಳೇ ಓದುತಿಹವು || 34 ||

ಅದರಿಂದ ಹರಿಯ ಮೂಲೋಕಂಗಳಿಗೆ ಲಯದ ಕಿಚ್ಚಿಂದ ಕೇಡಿಲ್ಲ |
ಮೊದಲುದಕಗಳೆಲ್ಲ ಪೋದ ಕಾರಣ ಲಕುಮಿ ದಧಿಯಾದಳಾಗಚ್ಯುತಗೆ || 35 ||

ತತ್ವಗಳಿಗತಿದೂರವಾದ ದೇಶದಲಿ ಜಗತ್ತಿನ ಪ್ರಳಯ ಕಾಲದಲ್ಲಿ |
ಭರ್ತಗೆ ರಮೆ ತಾನೆ ಭೂಷಣಾಯುಧ ಲಿಂಗ ವಸ್ತ್ರ ಮಾಲೆಗಳಾಗಿಹಳು ಗಡ || 36 ||

ಅಂಬುಧಿಯಾದಳೆ ಆಗ ಮಹಲಕುಮಿ ಅಂಬರಾಭರಣವಾಗಿಹಳೆ |
ಪೊಂಬಣ್ಣದಾಲದೆಲೆಯು ತಾನಾದಳೇನೆಂಬನವಳ ಸಾಹಸವನು || 37 ||

ಮಂದಾರಕುಸುಮದ ಮಾಲೆ ತಾನಾದಳು ಗಂಧ ಪರಿಮಳವಾದಳು |
ಮಂದ ಮಾರುತನಂತೆ ಸುತ್ತಲು ಸುಳಿವಳು ಇಂದಿರೆಯಿರವನೇನೆಂಬೆ || 38 ||

ಮುಖವೆಂಬ ಚಂದ್ರಮನ ಸೊಬಗು ಬೀರುವಳಾಗ ಸುಖ ತನ್ನ ವಚನ ಶುಕೋಕ್ತಿಗಳ |
ಪಿಕನಂತೆ ಪಾಡುವಳು ಪ್ರಾಣನಾಯಕನಿಗೆ ಸಕಲ ಸಂಭ್ರಮ ತೋರುವಳು || 39 ||

ತುಂಬಿ ಸುಳಿವಂತೆ ಕಂಗಳ ನೋಟದಿಂದಂಬುಜಾಕ್ಷನಿಗರ್ತಿಯಿತ್ತು |
ಬಿಂಬಾಧರದೊಳಿಪ್ಪ ಸುಧೆಯ ರಸವವನಿಗೆ ಚುಂಬಿಸಿ ಉಣಿಸಿದಳಾ ಬಾಲೆ || 40 ||

ಭೂ ಲಕ್ಷ್ಮಿ ದುರ್ಗೇರು ಲಾಲಿಸುತಿರೆ ಹರಿ ಆಲದೆಲೆಯ ಮೇಲೆ ಮಲಗಿದ |
ಆ ಲಯಾಂಬುಧಿಯ ಕಲ್ಲೋಲದುಯ್ಯಾಲೆಯಾಡಿದನಾಗ ಲೀಲೆಯಲಿ || 41 ||

ಒಮ್ಮೆ ದುರ್ಗೆಯಹಳೊಮ್ಮೆ ಭೂಮಿಯಪ್ಪಳೊಮ್ಮೆ ಶ್ರೀದೇವಿಯಾಗಿಹಳು |
ಇಮ್ಮೈಯಳೊಮ್ಮೊಮ್ಮೆ ಪತಿಯಪ್ಪುವಳು ಸುಖ ಚಿನ್ಮಯಳರ್ತಿಯನೇನೆಂಬೆ || 42 ||

ಇವಳಪ್ಪಿಕೊಂಬಾಗ ಹರಿಯ ವಕ್ಷದ ಗಂಧ ಅವಳುರೋಜದಿ ತೋರುತಿಹುದು |
ಅವಳ ಚುಂಬಿಸಿದಾಗ ಪತಿದಂತದ ಗಾಯ ಅವಳಧರದಲೊಪ್ಪುತಿಹುದು || 43 ||

ಅಚ್ಯುತನುದರದಿ ಲಿಂಗದೇಹದ ಕಣ್ಣ ಮುಚ್ಚಿ ಜೀವರು ನಿದ್ರೆಗೈಯೆ ।
ಎಚ್ಚೆತ್ತಿಹನು ಗಡ ಮುಖ್ಯ ಪ್ರಾಣ ಸ್ವಸ್ಥ ಚಿತ್ತದಿ ಮುಕ್ತರೊಡನೆ ॥ 44 ॥

ಪ್ರಳಯೇಪ್ಯವಿಲುಪ್ತ ಬಾಹ್ಯಜ್ಞಾನನೆಂದಖಿಳರೊಳು ಮುಖ್ಯ ಮಾರುತನ ।
ನೆಲೆಯರಿತು ವಾಯುರ್ವಾವ ನಿತ್ಯನೆಂಬ ನಿರ್ಮಲ ಶ್ರುತಿ ಗರ್ಜಿಸುತಿದೆ ಕೋ ॥ 45 ॥

ದೇಹಿ ನಿದ್ರಿತನಾಗೆ ಅವನ ದೇಹದೊಳಿರ್ದ ದೇವರು ನಿದ್ರೆಯ ಗೈಯೆ ।
ಹೋಹ ಬಾಹ ಶ್ವಾಸಗಳಾಗ ನಡೆಸುವನೀ ಹದ ಲಯದ ಕಾಲದಲಿ ॥ 46 ॥

ಬ್ರಹ್ಮನ ನೂರ್ವರ್ಷ ಪ್ರಳಯ ಮಾನ ತನ್ಮಧ್ಯೆಂಭತ್ತೇಳ್ವರೆ ಅಬ್ದ ।
ಸುಮ್ಮನೆ ಹೋಹುದು ಅದರ ತುದಿಯಲ್ಲಿ ನಮ್ಮ ದುರ್ಗಮ್ಮಗೆಚ್ಚರಿಕೆ ॥ 47 ॥

ಎಂದೆಂದು ನಾಶವಿಲ್ಲದ ಪ್ರಕೃತಿ ತಾನಿನ್ನಂದವ ಕಾಣಲೀಯಳೆ !
ಇಂದ್ವರ್ಕ ಕೋಟಿಗಳ ಪ್ರಭೆಯ ನಿನ್ನ ತೇಜೋವೃಂದಕ್ಕೆ ಇನ್ನೋಬ್ಬರಿದಿರೆ ॥ 48 ॥

ಇವಳ ಕೊಲ್ಲಲಿಬೇಡ ಜೀವಾವರ್ಕಂಗಳ ವಿವರದಿಂದವಳ ತೊಲಗಿಸು ।
ಅವಳಲ್ಲದಿನ್ನು ಜೀವರ ಕಣ್ಗೆ ನಿನ್ನ ನುಚ್ಚುವರಾರು ಮೂಜಗದೊಳಗೆ ॥ 49 ॥

ಹೀನ ಜೀವರ ತುಚ್ಛಜ್ಞಾನಾದಿ ಗುಣಗಳ ನಾನೇಕೆ ಬಂಧಿಸಬೇಕೋ ?
ಈ ನೀಚ ಕರ್ಮಕೆ ನೀಚಾಂಶ ಸಾಕೆಂದು ತಾನೆ ಜಗದ್ರೂಪಳಾಗಿಹಳೋ ॥ 50 ॥

ನಿರವಧಿಕ ಮಹಿಮೆಯ ನಿನ್ನಾಜ್ಞೆಯಿಂದಲಿ ಅರಿಯದಂತಾಚರಿಸುವಳು ।
ಹರಿ ನಿನ್ನ ಮಾಯೆಯ ಕೊಲ್ಲಬೇಡ ಜೀವರಾವರ್ಕಮಾಯೆಯ ಕೊಲ್ಲು ಕೊಲ್ಲು ॥ 51 ॥

ಜೀವಾವರ್ಕಂಗಳೊಳೆರಡು ಮಾಯೆಗಳಿಹವು ದೇವ ನೀ ಮಾಯಾದೂರನಲ್ಲೆ ।
ಶ್ರೀವಿಧಿ ಪೂರ್ವಕ ಶಕ್ತಿ ಪ್ರೇರಕನೆಂದು ಭಾವೆ ಗಂಡನ ಕೊಂಡಾದಿದಳು ॥ ॥ 52 ॥

ಪಾದವನೊತ್ತುತ್ತ ಸಕಲವೇದಂಗಳ ಹಾದಿಗಳನಾಲೋಚನದಿ ।
ಓದುತ್ತ ಪಾಡುತ್ತ ಪೊಗಳುತಿರಲು ಕೇಳಿ ಮೋದಿ ಹಯವದನ ಕಣ್ತೆರೆದ ॥ 53 ॥

ಇಂತು ಲಕ್ಷ್ಮೀಯೊಡನೆ ಪ್ರಳಯದಿ ಮಲಗಿ ಶ್ರೀಕಾಂತನೆಚ್ಚೆತ್ತನೆಂಬಲ್ಲಿ |
ಸಂತೋಷವನೀವ ಎರಡನೆ ಸಂಧಿ ಸಂತರು ಮೆಚ್ಚೆ ಮುಗಿಯಿತು || 54 ||

ಶ್ರೀಧರ ಹಯವದನರಾಯನ ದಯದಿಂದ ವಾದಿರಾಜೇಂದ್ರ ವಿರಚಿಸಿದ |
ಈ ದಿವ್ಯಕಾವ್ಯದಿ ಲಯವನೊರೆದ ರಮ್ಯವಾದಿ ದ್ವಿತೀಯ ಸಂಧಿ ಪೊಸಬಗೆ || 55 ||

## || ಸೃಷ್ಟಿಸಂಧಿ ||

ಒಬ್ಬ ನಾರಾಯಣನು ಲಯದಲ್ಲಿಹನು ಗಡ ಅಬ್ಜಸಂಭವನಾಗ ಎಲ್ಲಿಹನೋ |
ಅಬರದ ರುದ್ರ ಮತ್ತಿರ್ದ ದೇವರ್ಕಳು ಸರ್ಬ ಋಷಿಗಳಲ್ಲಿಲ್ಲ ಗಡ || 1 ||

ಏಕೋ ನಾರಾಯಣ ಅಸೀದೆಂಬ ಶ್ರುತಿ ಶ್ರೀಕೃಷ್ಣಲೊಬ್ಬನೆ ಪ್ರಳಯದಲಿ |
ಆಕಾಲದಿ ' ನ ಬ್ರಹ್ಮ ನ ಚ ಶಂಕರ' ಎಂದು ಬೇಕಾದರ್ಥವ ನಿರ್ಣೈಸಿತಲ || 2 ||

ಪ್ರಳಯಕಾಲದಿ ಎಲ್ಲ ಜಗವ ಲಯವ ಮಾಡಿ ಲಲನೆ ಲಕ್ಷ್ಮಿಯೊಡನೆ ವಟದ |
ಎಲೆಯಲ್ಲಿ ಮಲಗಿ ಸುಖದಲಿಪ್ಪನೆಂದೆಂದು ಅಳಿವಿಲ್ಲ ಪ್ರಕೃತಿ ಪುರುಷರಿಗೆ || 3 ||

'ಸಮನಾ' ಎಂಬ ಸೂತ್ರ ಪ್ರಕೃತಿ ಶಬ್ದವಾಚ್ಯ ರಮೆಗೂ ತತ್ಪುರುಷ ಶ್ರೀಹರಿಗೂ
ಸಮದೇಶಕಾಲಗಳಲ್ಲಿರುವು ಪೇಳಿತಾಗಿ ಭ್ರಮ ಸಲ್ಲ ನಾವೆಂದರ್ಥದಲಿ || 4 ||

ಬೊಮ್ಮನ ಪ್ರಳಯದಲಿ ಸುಮ್ಮನೆಯಾಗಿರ್ದ ನಮ್ಮ ದೇವಗೆ ಮೃತ್ಯು ಇಲ್ಲ |
ಜನ್ಮನಿವಗೆ ಸಲ್ಲ ಪ್ರಾಗಭಾವವಿಲ್ಲ ಅಮ್ಮಮ್ಮ ಮೃಣ್ಮಯವಹುದೆ || 5 ||

ಜನನ ಮರಣಗಳ ತೊರೆದು ಲಯದಲಿ ಹರಿ ವನಿತೆಯರ ಒಡಗೂಡಿದಾಗ |
ಮನೆಮನೆ ದೈವಂಗಳೆಲ್ಲಿ ಪೋದವು ? ಸರ್ವಾಗ್ರಣಿ ಬೊಮ್ಮನೆ ಹೆಮ್ಮಗನು || 6 ||

ಅನೇಕ ದನುಜರಟ್ಟುಳಿ ಬಂದ ಬಂದಾಗ ಅನುಸರಿಸಿವನ ಎಂದೆಂದೂ |
ಅನಾಯಾಸದಿ ಬಾಳುವ ದೇವರ ಹರಿಗೆಣೆ ಎಂಬರವಿವೇಕಿಗಳು ||7 ||

ಪರಾಂತಕಾಲೇ ಪರಿಮುಚ್ಯಂತಿ ಎಂಬ ನಿರವಕಾಶ ಶ್ರುತಿ ಇರಲು |
ದುರಾಶೆ ಬಿಡು ವಾದಿ ಇನ್ನೊಂದು ಲಯವೆಲ್ಲಿ ವಿರಿಂಚಿ ಲಯವೇ ಮಹಾಪ್ರಳಯ || 8 ||

ಈ ಲಯಕ್ಕಳುಕದ ಕಾರಣ ಹರಿಗುಣಗಳಿಗೆ ಲಯವು ಸಲ್ಲದಾಗಿ |
ತಾಳದು ನಿರ್ಗುಣ ನಿರಾಕಾರದ ಮತ ಆಲೋಚನೆಯ ಬಲ್ಲವರಿಗೆ || 9 ||

ಏಕವೆನಿಪ ಬೊಮ್ಮವೈಕ್ಯವೆಂತಪ್ಪುದು ಏಕವೆ ಐಕ್ಯವಲ್ಲವಲ್ಲ |
ಏಕಸ್ಯ ಭಾವ ಐಕ್ಯವೆಂದು ಪೇಳುವ ವ್ಯಾಕರಣದ ಮಾತು ಕೇಳು || 10 ||

ಧರ್ಮವೆನಿಪ ನಿನ್ನ ಬೊಮ್ಮ ಜೀವರೈಕ್ಯ ಚಿನ್ಮಾತ್ರವಲ್ಲ, ದ್ವಿತೀಯ |
ಅಮ್ಮಮ್ಮ ಅದ್ವಿತೀಯವೆಂಬ ಶ್ರುತಿ ನಿನಗೆ ಸಮ್ಮತೈಕ್ಯವ ಖಂಡಿಸಿತಲ್ಲ || 11 ||

ತನ್ನ ಬಾಯಿಗೆ ಮುಟ್ಟುತಿಹ ಮೂಷಕವ ಬಿಟ್ಟು ನಿನ್ನ ಶ್ರುತಿ ಎಂಬ ಭುಜಗಿ |
ಅನ್ಯತ್ರ ಪೋಗದು ಎಂದರಿಂದುದರ ಸಂಪೂರ್ಣವಾಗಲು ಮತ್ತೆರಗದು || 12 ||

ಲೋಕವಿಲ್ಲೆಂಬಾಗ ಲೋಕಾಂತರ್ಗತವಾದೀ ವಾಕು ತಾನೆ ಪೋಗದಿಹುದೇ ?
ತಾ ಕೆಡುವರ್ಥವ ತಾನಕಟ ಪೇಳ್ವರೆ ಕಾಕು ಮಾಡದಿರು ಶ್ರುತಿಗಳ || 13 ||

ಶ್ರೌತವಾದರ್ಥವಾ ಶ್ರುತಿಯನ್ನೆ ಕೆಡಿಸುವ ಘಾತಕವಂ ಗೈಸುವುದೆ ?
ಯಾತರಿಂದೇನಾಯ್ತು ತದ್ವಿಘಾತಕ್ಕೆ ಹೇತುವಲ್ಲೆಂಬರು ಬುಧರು || 14 ||

ಚಿನ್ಮಾತ್ರಾಶ್ರಯವೆಂಬ ನಿಮ್ಮ ಜ್ಞಾನವು ನಮ್ಮ ನಾರಾಯಣಗಿಲ್ಲ |
ರಮ್ಮೆಯರಸ ತನ್ನ ನಾಭಿ ಕಮಲದಿಂದ ನಿರ್ಮಿಸಿದೀ ಜಗತು ಪುಸಿಯೇ ? || 15 ||

ಅನಾದಿ ಮಾಯಾಸುಪ್ತನು ಜೀವನು ಅನಿದ್ರ ಗಡ ಪರಬೊಮ್ಮ |
ಅನುಭವಕೆ ತಂದುಕೋ ಈ ಶ್ರುತಿಯರ್ಥವ ಮನಕೆ ಬಂದಂತಾಡ ಬೇಡ || 16 ||

ಮೃತಿ ಇಲ್ಲದವ ನಿತ್ಯಾಮೃತನೆಂದು ಪ್ರಸಿದ್ಧ ಕೃತಿ ಇಲ್ಲದವ ಪುನರ್ಭವಕೆ
ಅತಿ ದೂರನಲ್ಲವೆ ಅದರಿಂದ ನಮ್ಮ ಶ್ರೀಪತಿ ನಿತ್ಯಮುಕ್ತ ಬಲ್ಲವರಿಗೆ || 17 ||

ಅವ ನಿತ್ಯಮುಕ್ತ ಜೀವರು ಮಧ್ಯ ಮುಕ್ತರೆಂಬ ವಿರುದ್ಧ ಧರ್ಮ ಮುಕ್ತಿಯೊಳು |
ಸುವಿವೇಕಿಗಳಿಗೆ ಸಮ್ಮತವಾದ ಕಾರಣ ಇವನೈಕ್ಯವಲ್ಲಿಯು ಸಲ್ಲ || 18 ||

ಎಂದೆಂದು ಕರ್ಣ ಶೂನ್ಯ ಪನ್ನಗನಿಗು ಕಳುವಿನಿಂದ ಕರ್ಣಪೋದವಗೂ |
ಮಂದ ಮಾನವ ಮಹದಂತರವಲ್ಲವೆ ಈ ಯೆಂದ ನಿತ್ಯ ಮಧ್ಯಮ ಮುಕ್ತರಿಗು || 19 ||

ಸಾಯುಜ್ಯವೆಂಬ ಶಬ್ದವು ಶಾಬ್ದಿಕರಿಗೆ ಯುಜಿಯೋರ್ಗೆ ಎಂಬ ಧಾತುವಿನಿಂ |
ಆಯಿತೆಂಬುದು ಸಿದ್ಧ ಆದರಿಂದ ಬಾಯಿಗೆ ಬೀಗ ವಾಯಿತಲ್ಲ ಖಳ || 20 ||

ಹರಿಯ ಸರ್ವಾಂಗದಿ ತುಂಬಿರ್ದ ದೇವರ ಇರವೇ ಸಾಯುಜ್ಯವೆನಿಸುವುದು |
ಮರುಳಾಗಬೇಡ ಮಾನವ ಸರ್ವೇಶನೆತ್ತ ಹರಿಯನುವ್ರತ ಮುಕ್ತರೆತ್ತ || 21 ||

ಸ್ರಕ್ಷಯೇಹಿ ಚೇತನಗಣಾನ್ ಸುಖ ದುಃಖ ಮಧ್ಯ
ಸಮ್ಪ್ರಾಪ್ತಯೇ ತನುಭೃತಾಂ ವಹೃತಿ ಮಮೇಚ್ಛನ್ |
ಸೋSಯಂ ವಿಹಾರ ಇಹ ಮೇ ತನುಭೃತ್ ಸ್ವಭಾವ
ಸಮ್ಭೂತಯೇ ಭವತಿ ಭೂತಿಕೃದೇವ ಭೂತ್ಯಾಃ ||

ಮತ್ತೊಂದು ತಂಡದ ಜೀವರಾಶಿಗಳಿಗೆ ಮುಕ್ತಿಯೆ ಮೊದಲಾದ ಗತಿಯ |
ಚಿತ್ತಜನಯ್ಯನಿತ್ತಪೆನೆಂದು ಪುನರಪಿ ಚಿತ್ರ ಜಗತ್ತ ನಿರ್ಮಿಸಿದ || 22 ||

ಇದು ಲೀಲೆ ತನಗೆ, ಲಕ್ಷ್ಮಿಗೆ ಮಹೈಶ್ವರ್ಯ ಪದ ಕೊಡುವುದು ಜೀವರಿಗೆ |
ಸದಸನ್ಮಿಶ್ರ ಫಲವಹುದು ಅದರಿಂದ ಅದುಭುತ ಜಗವ ನಿರ್ಮಿಸಿದ || 23 ||

ಲೋಹಿತ ಶುಕ್ಲ ಕೃಷ್ಣಗಳೆನಿಪ ಪ್ರಕೃತಿಯ ನೇಹವ ನಿಜ ಸತಿಗಿತ್ತು |
ಶ್ರೀಹರಿಯದರಿಂದ ವರ್ಣತ್ರಯದ ರೇಣು ವ್ಯೂಹವ ಬೇರೆ ಬೇರಿಟ್ಟ || 24 ||

ಸತ್ವವೆಂಬ ಗುಣ ಶುಕ್ಲಾಣುಗಳ ರಾಶಿ ರಕ್ತಾಣುಗಳೆ ರಜೋಗುಣ |
ಮತ್ತೆ ನೀಲಾಣುಗಳ ಮೊತ್ತವೆ ತಮೋ ಗುಣ ಪ್ರತ್ಯೇಕ ಶಕ್ತಿಗಳವಕೆ || 25 ||

ಈ ಪರಮಾಣುಗಳ ರೂಪವೆಂಬೋ ಗುಣ ವ್ಯಾಪಾರ ಬಹಳವಾಗಿರಲು |
ಆ ಪರಮಾಣುಗಳ ಗುಣವೆಂದು ಕರೆವರ್ರೈತಾಪಸರಿದಕೆ ಮೆಚ್ಚುವರು || 26 ||

ಯಾವದ್ ದ್ರವ್ಯ ಭಾವಿ ಗುಣಕೆ ಗುಣಿಯೊಳೇಕೀಭಾವವೆಂದೆಂಬ ರಹಸ್ಯ |
ಕೋವಿದರಿಗೆ ತೋರುವುದು ಈ ಗುಣಿಗಳನೆ ಭಾವಜ್ಞರ್ ಗುಣವೆಂದೆಂಬುವರು || 27 ||

ಇಪ್ಪತ್ತನಾಲ್ಕು ಈ ತತ್ವಸೂಕ್ಷ್ಮಂಗಳಿಗೆ ತಪ್ಪದೆ ಸ್ಥೌಲ್ಯ ಬಪ್ಪಂತೆ |
ಒಪ್ಪುವೀ ಗುಣ ತ್ರಯದಣುಗಳ ಕೂಡಿಸಿ ಸರ್ಪಶಯನ ಸೃಷ್ಟಿಸಿದ || 28 ||

ಬೆರೆಸಿದ ಇಪ್ಪತ್ತನಾಲ್ಕು ತತ್ವಂಗಳ ಪರಮಸೂಕ್ಷ್ಮಾಣು ರಾಶಿಗಳ
ತರತರದಿ ತೆಗೆದು ತತ್ವಂಗಳ ಸಾಲ ವಿರಚಿಸುವಂದ ಸಾಲದೆ || 29 ||

ಎಷ್ಟು ಮಹತ್ತತ್ವ ಸೃಷ್ಟಿಗಾಗಿ ಬೇಕೋ ಅಷ್ಟು ತ್ರಿಗುಣದಂಶಗಳ |
ಇಟ್ಟು ಮತ್ತದರಿಂದಹಂಕಾರ ತತ್ವವ ಸೃಷ್ಟಿಸುವುದಕೊಂದಿಷ್ಟಿಡುವ || 30 ||

ಕಾರಣ ತತ್ವರಾಶಿಗಳಿಂದ ತೆಗೆತೆಗೆದು ಬೇರಿದ್ದ ತ್ರಿಗುಣದಂಶಗಳ |
ಸೇರಿಸಿ ಉತ್ತರೋತ್ತರ ತತ್ವಂಗಳ ಸಿರಿಧರನು ಮಾಡುವ ಕ್ರಮದಿಂದ || 31 ||

ಮಹತ್ತೆಂಬ ತತ್ವ ಮಹಿಮೆಯನೀವುದು, ಅಹಂತತ್ವದಿಂದಹಂಕಾರ |
ಬಹುದು, ಬುದ್ಧಿಯು ನಿಶ್ಚಯಿಸಿ ಕೂಡುವುದು, ನಾನಾ ಹಂಬಲಿಕೆಯ ಮನವು || 32 ||

ಐದು ಜ್ಞಾನೇಂದ್ರಿಯಗಳೈದು ಕರ್ಮೇಂದ್ರಿಯಗಳೈದು ತನ್ಮಾತ್ರ ತತ್ವಂಗಳು |
ಐದು ಭೂತಂಗಳಿಂದಿಪ್ಪತ್ತ ನಾಲ್ಕು ಆದಿ ಕಾಲದ ತತ್ವಂಗಳು || 33 ||

ಹತ್ತು ಕರಣಂಗಳು ನಿತ್ಯದಿ ವಿಷಯಗಳರ್ತಿಯ ತೋರಿ ಈ ಮನವ |
ಅತ್ತಲೆಳೆಯಲು ಉಂಡುಂಡಹಂಕರಿಸೆ ಮರ್ತ್ಯಗೆ ಬಹುದೆ ಮಹತ್ವ ? || 34 ||

ನಿತ್ಯನೈಮಿತ್ತಿಕ ಸತ್ಕರ್ಮಂಗಳ ಮರೆದುತ್ತಮರೊಳು ಮತ್ಸರಿಸುವ |
ವಿತ್ತ ಸಂಪತ್ತಿಗುನ್ಮತ್ತನಾಗಿ ಭವದಲಿ ಸುತ್ತಿ ಸುತ್ತಿ ಅರ್ತಿಯನುಂಬ || 35 ||

ಅಂಗನೇರಾಸೆಗೆ ಚರಣಗಳು ನಡೆಸುವುವು ಕಂಗಳವರಂಗವ ತೋರುವುವು
ಬಂಗಾರ ಕೂಡಿಸ್ಯವರ ಎಂಜಲುಣಿಸುವವು ಕರ್ಣಂಗಳು ನುಡಿಗೆ ಮರುಳಹವು || 36 ||

ದುಷ್ಟಾನ್ನ ಉಂಡುಂಡು ಪೊಟ್ಟೆಪೊರೆಯಿಸುವವು ಭ್ರಷ್ಟರ ಕೂಡ್ಯಾಡಿಸುವವು |
ಕೊಟ್ಟರೆ ಪೊಗಳಿಸುವವು ಕೂಡದಿದ್ದರೆ ಬೈಸೋವು ಕಷ್ಟಗತಿಗೆ ಕಡೆಗೆಳೆಸುವವು || 37 ||

ಈ ತತ್ವಂಗಳಿಗೊಡೆಯರಾದ ದೇವತೆಗಳ ವ್ರಾತಗಳನಿವು ಕೆಡಿಸವು |
ಭೂತಳದೊಳಗರಸಿನ ಮನೆ ಸಂಕೋಲೆ ಆತನ ಕಾಲು ಕಟ್ಟುವುದೆ || 38 ||

ಜೀವರಾಶಿಗಳಿಗೀ ತತ್ವಂಗಳಿಂದಲೆ ನೋವನೀವುತ ಭವದೊಳಗೆ
ತಾವಿದಕ್ಕೊಳಗಾಗದಿಹರು ಶ್ರೀಹರಿಯ ಕೃಪಾವಲೋಕನ ಬಲದಿಂದ || 39 ||

ಇಂತು ಭ್ರಾಂತಿಯನೀವ ತತ್ವಂಗಳ್ ಮಹಾಂತರ ಸಂಗ ದೊರಕೊಳಲು
ಸಂತತ ಶ್ರವಣಾದಿ ಸನ್ಮಾರ್ಗಕ್ಕೆರಗಿಸಿ ಕಂತುಪಿತನ ತೋರಿಸುವುವು || 40 ||

ಹರಿಯತ್ತ ನಡೆಸುವವು ಹರಿನಾಮ ನುಡಿಸುವುವು ಹರಿಪೂಜೆಗಳ ಮಾಡಿಸುವುವು |
ಹರಿಮೂರ್ತಿ ನೋಡಿಸಿ ಹರಿಕೀರ್ತಿ ಕೇಳಿಸಿ ನರರಹಂಕೃತಿಯ ಕೆಡಿಸುವವು || 41 ||

ಉಕ್ಕು ತಗ್ಗಿಸುವವು ಸೊಕ್ಕ ನಿವಾರಿಸುವವು ಸತ್ಕರ್ಮಕಿಕ್ಕಿ ಸಲಹುವವು |
ದುಃಖವನೀವ ಪಞ್ಚಭೂತಾತ್ಮಕ ದೇಹದಕ್ಕರ ಬಿಡಿಸಿ ರಕ್ಷಿಸುವುವು || 42 ||

ಈಸು ಪುಣ್ಯ ಮಾಡಿ ದಿನದಿನದಿ ಧೇನಿಸೆ ಶ್ರೀಶ ಸಂತೋಷಿಸಿ ತನ್ನ |
ಭಾಸುರ ಮೂರ್ತಿಯ ಕಣ್ಗೆ ಕಾಣಿಸಿಕೊಡುವ ದೋಷಂಗಳನು ದೂರೋಡಿಸುವ || 43 ||

ಅಂತರವಿಲ್ಲದ ಸ್ವರೂಪಸುಖದನುಭವಕೆ ಅಂತರಾಯ ಮಾಳ್ಪವೆಂದು |
ಚಿಂತಿಸಿ ತುದಿಯೊಳಿವ ಸಂತರಿಸುವಂತೆ ಶ್ರೀ ಕಾಂತನ್ನ ಸಂತರ್ಬೇಡುವರು || 44 ||

ಕಣ್ಣಂಶ ಕಾಣೋದು ಕಿವಿಯಂಶ ಕೇಳೋದು ರಸನ್ನಂಶ ಆಸ್ವಾದಿಸುವುದು |
ಭಿನ್ನ ತತ್ವಂಗಳಿಗೆ ಭಿನ್ನ ಭಿನ್ನ ಕಾರ್ಯವನ್ನು ಮಾಡುವ ಶಕ್ತಿ ಕಾಣಿರೊ || 45 ||

ಅನ್ಯೋನ್ಯ ಕಾರ್ಯವ ಮಾಡಲರಿಯವು ಚರಣ್ಣನಡೆವಂತೆ ಕೈ ನಡೆಯುವುದೆ ?
ಘ್ರಾಣ ಗಂಧ ವಾಘ್ರಾಣಿಸುವಂತೆ ತ್ವಕ್ಕು ಆ ಘ್ರಾಣಿಸುವುದು ಬಲ್ಲುದೆ ಕೇಳಿ? || 46 ||

ಇಂಬುಗೂಡುವಡೆ ಅಂಬರವೆ ಬೇಕು ಬಾಯಿಂದುಂಬುದಕೆ ವಾಯು ಬೇಕು |
ಉಂಬಡುಗೆಗೆ ಕಿಚ್ಚು ಬೇಕು ತೃಷಕಳೆವರೆ ಅಂಬು ಬೇಕುಣಲನ್ನ ಬೇಕು || 47 ||

ಅದರಿಂದಿಪ್ಪತ್ತ ನಾಲ್ಕು ತತ್ವಂಗಳಿಗೆ ಅಧಿಕ ನ್ಯೂನ ಸಂಖ್ಯೆ ಸಲ್ಲ |
ಇದನು ವಿವೇಚಿಸಿ ಹರಿ ಕಂಡು ಅವರವರಿಂ ಮೊದಲೆ ರಾಶಿಗಳನು ಸೃಜಿಸುವ || 48 ||

ಇಂತು ತತ್ವಸೂಕ್ಷ್ಮಾಂಶ ಪ್ರಕೃತಿಯೊಳನಂತಗಳಾಗಿಪ್ಪವು ಗಡ |
ಅಂಥ ರಾಶಿಗಳ ನಾನಾ ಧಾನ್ಯದ ರಾಶಿಯಂತೆ ಕೂಡಿ ಸೃಷ್ಟಿಸುವ || 49 ||

ಇದರೊಳು ಮೊದಲು ಮಹತ್ತತ್ವಾಂಶದ ಸೃಷ್ಟಿ ಅದರಿಂದ ಮೇಲೆ ಕ್ರಮಕ್ರಮದಿ |
ತುದಿಯ ಪೃಥ್ವಿ ತತ್ವಪರಿಯಂತ ಅವನವನೆ ಒದಗಿಸಿ ಕೊಡುವ ಹರಿಗೆಣೆಯುಂಟೆ ||50||

ಮಹತತ್ವ ದಂಶಗಳೆ ಶುಕ್ಲವಾಗಿಪ್ಪವು ಗಡ ಅಹಂತತ್ವ ಮೂರು ಬಣ್ಣದಲಿ |
ಅಹುದದರ ಶುಕ್ಲಾಣುಗಳಿಂದ ಬುದ್ಧಿ ಮನ ಲೋಹಿತಾಂಶದಲಿ ದಶೇಂದ್ರಿಯಗಳು|| 51||

ಕಪ್ಪಿನಂಶಗಳಿಂದ ಪಞ್ಚಭೂತಗಳು ಕಲ್ಪನೆಯಲ್ಲ ಪಿರಿಯರು |
ಒಪ್ಪಿ ಪೇಳುವರಿಂತು ಬುದ್ಧಿಯೊಡನೆ ಮನಕೊಪ್ಪ ಷೋಡಶ ಕಳೆಗಳು || 52 ||

ತಾಮಸವೆಂಬ ಕಪ್ಪಿನಂಶದಿಂದ ಪಂಚತನ್ಮಾತ್ರ ಸೃಷ್ಟಿ ಮೊದಲು ಗಡ |
ಆ ಮೇಲೆ ವ್ಯೋಮಾದಿ ಪಂಚ ಭೂತಂಗಳ ಜನ್ಮ ವಾಹೋದೆಂದು ಸಿದ್ಧಾಂತ || 53 ||

ತುದಿಯೊಳು ಸೃಷ್ಟಿಸಿದ ಇಪ್ಪತ್ತಮೂರನೆ ಉದಕವೆಂಬ ತತ್ವದೊಳಗೆ |
ಕದಡದಂತೆ ಭೂರಜ ಮಾಡಿ ಕೊಡಲಂತುದಿಸಿದುವಖಿಲ ತತ್ವಗಳು || 54 ||

ಇಂಥ ಮಹದಾದಿ ತತ್ವಗಳ ಸೃಷ್ಟಿಸಿ ತತ್ತತ್ ಸ್ಥಾನದೊಳಿಟ್ಟು ಪೊರೆವ |
ಉತ್ತಮ ಪುರುಷ ಅದರೊಳು ಪೋಗುತಿರಲು ಸುತ್ತ ಸುರರ ನಿರ್ಮಿಸಿದ || 55 ||

ಶುದ್ಧ ಸತ್ವಗುಣದಿಂದಲೆ ತತ್ವಂಗಳಾಳ್ದ ದೇವರ ದೇಹಂಗಳನು |
ಮಾಳ್ದನವರವರ ಯೋಗ್ಯತೆಗೆ ತಕ್ಕಷ್ಟು ಕೂಡ್ದ ಮಿಕ್ಕ ಗುಣಾಂಶಗಳನು || 56 ||

ಮತ್ತೆ ತನ್ನರಸಿಯೊಡನೆ ನೀರೊಳ್ ಮಲಗಿದ್ದು ತತ್ವದೊಂದೊಂದಂಶಗಳನು |
ಚಿತ್ರ ರೇತವ ಮಾಡಿ ಚಿನ್ನದಜಾಂಡವ ಸತ್ಯ ಸಂಕಲ್ಪ ನಿರ್ಮಿಸಿದ || 57 ||

ನೀರೊಳಗಿರ್ದ ಭೂರೇಣುಗಳೆಲ್ಲವ ಸೇರಿಸಿ ತನ್ನುದರದೊಳು |
ಆ ರಮೆಯ ಗರ್ಭದಿಂ ಯೋನಿದ್ವಾರದಿ ತೆಗೆದು ನೀರಜಜಾಂಡವನು ನಿರ್ಮಿಸಿದ || 58 ||

ನೂರು ಕೋಟಿ ಯೋಜನ ಪ್ರಮಾಣದಿ ಸುತ್ತ ಸೂರಿಯನಂತೆ ಶೋಭಿಸುವ |
ಆ ರಮ್ಯ ಬೊಮ್ಮಾಂಡ ಪೊಕ್ಕು ಪುನರಪಿ ನೀರೊಳು ಕೃಷ್ಣ ಪವಡಿಸಿದ || 59 ||

ಬೊಮ್ಮಾಂಡದೊಳು ಇಪ್ಪತ್ತನಾಲ್ಕು ತತ್ವ ಸುಮ್ಮಾನವಾಗಿ ಬೆರೆಸಿಹವು |
ಆ ಮೇಲೆ ಭೂಮ್ಯಾದಿ ಹತ್ತಾವರಣಂಗಳು ಕ್ರಮ್ಮದಿ ಸುತ್ತು ಸುತ್ತಿಹವು || 60 ||

ಪೃಥ್ವಿರೂಪವಾದ ಅಂಡವೆಂಬಾವರಣ ಸುತ್ತಲೂ ಸುತ್ತಿಕೊಂಡಿಹುದು |
ಮತ್ತೆ ಅಬಾದಿ ಸತ್ವಾಂತವಾದಾವರಣ ಹತ್ತು ಹತ್ತಾಗಿ ಬೆಳೆದಿಹವು || 61 ||

ಬೆಳೆದ ಠಾವಿನಲ್ಲಿ ಮೇಲ್ ಮೇಲಾದಾವರಣ ಉಳಿದ ತತ್ವವನೊಳಗೆಳೆದು |
ಒಳಗೆ ಹೊರಗೆ ಎಲ್ಲ ಸುತ್ತಿಕೊಂಡೀಪರಿಯಲ್ಲಿ ಸೇರಿದ ಮಹಿಮೆ ಇದೆಕೋ || 62 ||

ಉತ್ತರೋತ್ತರ ತತ್ವಕ್ಕಧಿಕ ವ್ಯಾಪ್ತಿ ಬೇಕು ಸುತ್ತಸುತ್ತಿಹುದ್ಯೆಸೆ ಎನಲು |
ತತ್ವಮಯವಾದ ದೇಹಗಳೆಂತಿಪ್ಪವು ಜೀವರ ತ್ರಿಗುಣಂಗಳೆಂತು ಕಟ್ಟುವವು || 63 ||

ಒಳಹೊರಗೆ ವ್ಯಾಪ್ತವಾಗಿಹವು ಮೇಲಣ ತತ್ವ ಕೆಳಕೆಳಗೆ ಕೀಳು ತತ್ವಗಳಿಹವು
ಜಲಜನಾಭನಿಂತು ಹತ್ತಾವರಣಂಗಳ ಒಳಗೆ ಈ ಜಗವ ನಿರ್ಮಿಸಿದ || 64 ||

ನೂರುಕೋಟಿ ಯೋಜನ ಮೊದಲಂಡಾವರಣಕೆ ನೀರ ಮೇಲೀರೇಳಾಗಿ |
ತೋರೋ ಲೋಕಂಗಳಿಂದ್ಯೆವತ್ತು ಕೋಟಿ ಮೇಲಾರು ಮೂರಾವರಣ ದಶೋತ್ತರವು ||

ಇಂತೆಲ್ಲವು ಕೂಡಿ ವ್ಯಾಪ್ತವಾದ ಲಕುಮಿಕಾಂತನ ದಿವ್ಯ ಶ್ರೀಮೂರ್ತಿ |
ಅಂತುಕೊಂಡಿಪ್ಪುದು ರೋಮಕೂಪವೆ ತುಂಬವಂತೆ ಆ ಹರಿಗನ್ನಾರೆದುರು || 66 ||

ಅಂಡೋದಕದಿ ಸಾಸಿರ ವರ್ಷ ಪರ್ಯಂತ ಪುಂಡರೀಕಾಕ್ಷ ಪವಡಿಸಿದ |
ಚಂಡಾಂಶು ಸಹಸ್ರ ಸನ್ನಿಭ ನಾಭಿಯಿಂದುದ್ದಂಡಕಮಲವ ನಿರ್ಮಿಸಿದ || 67 ||

ಇಪ್ಪತ್ತೈದು ಕೋಟಿ ಯೋಜನ ಬೆಳಗುವ ತತ್ಪದ್ಮದಲ್ಲಿ ಪದ್ಮಜನ |
ಕಲ್ಪಿಸಿ ಆ ಪದ್ಮದಳದಲ್ಲಿ ಈರೇಳಾಗಿಪ್ಪ ಲೋಕಗಳ ಮಾಡಿದನು || 68 ||

ಮೊದಲ ಬೊಮ್ಮನಿಗೆ ಮುಕುತಿಯ ಪದವನಿತ್ತು ಉದರದಿ ಮುಖ್ಯಪ್ರಾಣನಿಗೆ
ಪದುಮ ಸಂಭವನೆಂಬ ಪಟ್ಟವನಿತ್ತು ಈ ಹದಿನಾಲ್ಕು ಲೋಕವನಾಳೆಂದ || 69 ||

ಆರುನೂರು ಕೂಡಿ ಇಪ್ಪತ್ತೊಂದು ಸಾವಿರ ಮಂತ್ರೈಕ ಶ್ವಾಸಜಪವ |
ಮಾರುತ ಈರೇಳು ಲೋಕದ ಜೀವರೊಳೋರಂತೆ ಮಾಡಿ ಮೆಚ್ಚಿಸುವ || 70 ||

ಇಂಥ ಭಕ್ತನಿಗೆ ಬ್ರಹ್ಮಪಟ್ಟವನು ಶ್ರೀಕಾಂತ ಕಟ್ಟುವುದೊಂದಚ್ಚರಿಯೆ ?
ಎಂತೆಂತು ಸೇವಿಪರಂತರಂತವರ ದಯವಂತನನಂತ ರಕ್ಷಿಸನೆ ? || 71 ||

ಆರು ತಿಂಗಳು ಜಪಮಾಡಿದ ಧ್ರುವನಿಗೆ ಸೇರಿಸಿದನು ಧ್ರುವ ಪದವ |
ನೂರು ಬ್ರಹ್ಮನ ವರ್ಷ ಪರ್ಯಂತ ಈ ವಿಧದಿ ಆರಾಧಿಸಿದಂಥ ಭಕ್ತನಿಗೆ || 72 ||

ಪೂರೈಸಿ ಕೊಡುವುದಕೆ ಕಡೆಯಿಲ್ಲದ ಋಣ ಸಾಸಿರಕೊಂಡು ಕೊಟ್ಟು ತಿದ್ದುವಂತೆ |
ಮಾರುತಗೆ ಬ್ರಹ್ಮ ಪದವನಿತ್ತು ಮತ್ತವಗೆ ತನ್ನಾರೋಗಣೆಯಳರ್ಧವನೀವ || 73 ||

ಲೆಕ್ಕವಿಲ್ಲದ ನಾನಾ ಜೀವರು ಮಾಡುವ ಸತ್ಕರ್ಮಗಳ ಫಲವಾದ |
ಸೌಖ್ಯವ ಬೊಮ್ಮ ಪಟ್ಟವನಾಳ್ವದೇವನ ಲಕ್ಷ್ಮೀಶ ಕೂಡಿಕೊಂಡುಂಬ || 74 ||

ಅದರಿಂದ ಸಹ ಭೋಗ ಪದವೆಂಬ ಇಂಥ ಸಂಪದವೀವ ಮುಖ್ಯ ಪ್ರಾಣನಿಗೆ |
ಮದನನಯ್ಯ ನಿಂತು ಮಾಡಿದ ಸೇವೆಗೆ ಸದೃಶ ಫಲವಿಂತು ಕೊಡುವ || 75 ||

ನಂಬಿದ ಸಾಲಿಗೆ ಬಂದು ಬಂದು ಬೇಡಲುಂಬಾಗ ಕೂಡಿಕೊಂಡುಂಡು |
ನಂಬಿಸುವಂತೆ ಬೊಮ್ಮನಿಗರ್ಧ ಉಣಿಸಿ ಹರಿಉಂಬ ಸಂಭ್ರಮವನೇನೆಂಬೆ || 76 ||

ಬೊಮ್ಮನ ನೂರು ವರ್ಷ ಪರ್ಯಂತ ಸಮ್ಮೀರ ಮಾಡಿದ ಜಪಕೆ|
ಸಮ್ಮತ ಫಲ ಒಂದು ಬ್ರಹ್ಮಕಲ್ಪದಲುಣಿಸಿ ರಮ್ಮೇಶ ತಾನೆಂದೆಂದುಂಬ || 77 ||

ಅಂದು ಹನುಮನಿಗಿತ್ತ ಚಂದದ ವರವನು ಇಂದು ಸಾರ್ಥಕ ಮಾಡಿದನು |
ಇಂದಿರೆಯೊಡಗೂಡಿ ತನ್ನ ಪುರಂಗಳ ಪೊಂದಿ ಆನಂದದಂದಿದ್ದ || 78 ||

ಕರ್ತ ಹಯವದನ ಬೊಮ್ಮಾಂಡದೊಳಗೆ ಸರ್ವತ್ರ ಜೀವರ ನಿರ್ಮಿಸಿಹನು |
ಮುಕ್ತವರ್ಗವ ತನ್ನ ಮೂರು ಸ್ಥಾನದಲ್ಲಿಟ್ಟು ವಿಸ್ತರಿಸಿದ ಶ್ರುತಿ ಪಥವ || 79 ||

ಇಂದಿರೇಶನಿಂತು ಈ ಜಗವೆಲ್ಲವ ಚಂದದಿಂದಲಿ ನಿರ್ಮಿಸಿದನು |
ಎಂದು ಪೇಳುವಲ್ಲಿ ಮೂರನೆ ಸಂಧಿಯ ಸಂದುಪೋಯಿತು ಕೇಳಿ ಬುಧರು || 80 ||

ದೈತ್ಯರಿಂದ ಬಾಧೆ ಬಂದ ಬಂದಾಗ ಹರಿ ಹತ್ತವತಾರಗಳ ಮಾಡಿ |
ಭೃತ್ಯರ ಪೊರೆದ ತನ್ನರ್ತಿಯ ಪೂಜೆಯ ಪತ್ತಿರ ಇದ್ದು ಕೈಗೊಂಬ || 81 ||

ಶ್ರೀಧರ ಹಯವದನ ರಾಯನ ದಯದಿಂದ ವಾದಿರಾಜೇಂದ್ರ ವಿರಚಿಸಿದ |
ಈ ದಿವ್ಯಕಾವ್ಯದಿ ಸೃಷ್ಟಿಯೊರೆವ ರಮ್ಯವಾದ ತೃತೀಯ ಸಂಧಿ ಪೊಸಗೆ || 82 ||

## || ಸ್ಥಿತಿ ಸಂಧಿ ||

ಇದು ಪುಣ್ಯಕಥೆ ಲೋಕಕ್ಕಿದೆಮುಕುತಿ ಪಥ ಇದ ಕೇಳುವವನೆ ಕೃತಾರ್ಥ |
ಇದು ಸರ್ವಸಾಧನ ವಿದುಗಳಿಗೆ ಸಮ್ಮತ ಮುದವನೀವುದ ಕೇಳ್ವಜನಕೆ ||

ನೀಲ ನಿರ್ಮಲಗಾತ್ರ ನಿರುಪಮ ಚರಿತ್ರ ಮೂಲಕಾರಣ ಮುಕ್ತರೊಡೆಯ |
ಪಾಲಸಾಗರ ಶಯನ ಪಂಕಜನಾಭನೆ ಪಾಲಿಸೋ ಪರಮಪಾವನನೆ || 1 ||

ಹಾರಕೌಸ್ತುಭಧರ ಹಾವಿನ ಮೇಲೊರಗಿಪ್ಪ ನಾರಾಯಣ ನಳಿನಾಕ್ಷ |
ಚಾರುಕುಂಡಲ ಚೆಲ್ಲ ಚಂದ್ರವದನನೆ ನೀ ಮಾರಜನಕ ಮನ್ನಿಸೆನ್ನ || 2 ||

ಪೊನ್ನ ಪಡೆಯ ಕಾಂಚಿ ಪೊಳೆವ ಪೀತಾಂಬರ ರನ್ನದ ಮುಕುಟ ರಾಜಿಸಲು |
ಅನ್ನ ಘ್ರ್ಯಾಭರಣದರ್ತಿಯ ಹರಿ ನಮಗುನ್ನತ ಸುಖವನುಣಿಸುವನು || 3 ||

ಕಂಜ ಕಂಬು ಚಕ್ರ ಕೌಮೋದಕೀ ಹಸ್ತ ಮಂಜುಳ ಮೂರ್ತಿ ಮಾರಮಣ |
ಕುಂಜರ ಭಯಹಾರಿ ಕುಜನ ಸಂಹಾರಿ ನಿರಂಜನ ರಕ್ಷಿಸೊ ಜಗವ || 4 ||

ದುಷ್ಟ ದಾನವರನೆ ಮೆಟ್ಟಿ ಸಜ್ಜನರ ಪ್ರತಿಷ್ಠೆಯ ಮಾಡಿ ರಕ್ಷಿಸಿದ |
ಪಟ್ಟವ ಶಕ್ರಂಗೆ ಕಟ್ಟಿ ಬಲಿಯ ಕೆಳಗಿಟ್ಟು ತನ್ನಿಷ್ಟರನು ಪೊರೆವ || 5 ||

ಗ್ರಂಥಾದಿಯಲಿ ಮಾಳ್ಪ ಮಂಗಳಕೆ ಸಲುವಂಥ ವೇದವಾಕ್ಯವಿಲ್ಲದಿರೆ |
ವ್ಯರ್ಥ ಶಿಷ್ಟಾಚಾರ ಭಯದಿಂದೊಂದು ಮೂಲ ಶ್ರುತಿಯ ತಂದು ಕೊಂಬುವುದು || 6 ||

ನಿಂಬಾದಿತ್ಯ ವಿಷ್ಣುಸ್ವಾಮಿ ಮತದವರೆಂಬ ನಿಮ್ಮವರೇ ಧರಿಸುವರು |
ತುಂಬಿದ ತತ್ವವಾದಿಗಳು ರಾಮಾನುಜರು ಸಂಭ್ರಮದಿ ಚಕ್ರ ಧರಿಸುವರೈ || 7 ||

ನಿಮ್ಮ ಮತದ ಸನ್ಯಾಸಿಗಳೆಲ್ಲರು ನಿರ್ಮಲೂರ್ಧ್ವ ಪುಂಡ್ರಧರಿಸಿ |
ತಮ್ಮ ಕರದಿಂದಲೆ ಚಕ್ರ ಮುದ್ರಿಕೆ ಸತ್ ಕರ್ಮ ಮಾಡುವಲ್ಲಿ ಧರಿಸುವರು || 8 ||

ಸ್ವತಪ್ತ ಚಕ್ರ ಸುಪವಿತ್ರ ಮುದ್ರಿಕೆ ಎಂದು ಶ್ವೇತೋರ್ಧ್ವ ಪುಂಡ್ರ ಜ್ವಾಲೆಂದು ನಿಮ್ಮ |
ಯತಿಗಳು ಮನ್ನಿಸಿದ ಶ್ರುತಿ ಇದು ಯಾತಕಿನ್ನು ಬರಿದೆ ಕಲಹ ? || 9 ||

ಇಷ್ಟು ಶಿಷ್ಟಾಚಾರಕ್ಕೆ ಮೂಲವಾದ ಸ್ಪಷ್ಟಾರ್ಥ ವೇದಗಳ ಬಿಟ್ಟು ಕೆಡುವರೆ ?
ಪಟ್ಟದ ರುದ್ರ ಪಾದ್ಮದಲೆತ್ತಿದ ಶ್ರುತಿಯೊಡಂಬಟ್ಟು ಚಕ್ರವ ಧರಿಸಿರೊ || 10 ||

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ |
ಅತಪ್ತ ತನೂರ್ನ ತದಾಮೋ ಅಶ್ನುತೇ ಶೃತಾಸ ಇದ್ ವಹಂತ ಸ್ತತ್ ಸಮಾಶತ ||

ಎಂಬೀ ಶ್ರುತ್ಯರ್ಥವ ತುಂಬಿ ಪೇಳಿದ ಪದವ ನಂಬಿ ಕೇಳಿರೊ ನಾವೆಂದುದೆ ತತ್ವ || 11 ||

ಉನ್ನತ ಬ್ರಹ್ಮನಿಗೆ ಪತಿ ಎನಿಪ ಪ್ರಭು ಜಗತ್ತಿನ್ನೊಳಗೆ ಹೊರಗೆ ಪೂರ್ಣ |
ನಿನ್ನಕರ ಕಂಜದಲಿ ನೆಲೆಸಿರ್ದ ಸುದರ್ಶನ ನಿನ್ನಂತೆ ಜಗದೊಳಗೆ ಪೂರ್ಣ || 12 ||

ತನ್ನವರ ಪವಿ ಪಂಜರದಂತೆ ತ್ರಾಯತ್ಯೆಂಬ ಮಾನ್ಯ ಪದಗಳ ಯೋಗ ಬಲದಿ |
ಧನ್ಯರೀ ಹರಿಚಕ್ರವನೆ ಪವಿತ್ರವೆಂಬ ಪುಣ್ಯನಾಮದಿ ಕರೆಯುತಿಹರು || 13 ||

ಈ ಚಕ್ರದಿಂದ ಅವತಪ್ತನೋ ಆ ನೀಚನಿಗೆ ಪರ ಸುಖ ದೊರಕದು |
ಯೋಚಿಸಲಾಮ ಘಟದಂತವ ಕೆಡುವ ತ್ರಿಲೋಚನನೀ ಶ್ರುತಿಯರ್ಥ ಪೇಳ್ದ || 14 ||

ಶೃಪಾಕೇ ಎಂಬ ಧಾತುವಿನಿಂದಲೀ ಚಕ್ರ ತಾಪ ಭುಜಯುಗದಲ್ಲಿಹುದು |
ಗೋಪಿಚಂದನದಿಂದಲನುದಿನವು ವಹಿಸುವರ ಕೃಪಾಳು ಹರಿಯವರಿಗೊಲಿವ || 15 ||

ಉದರವ್ಯಥೆಯ ಬಿಡಿಸುವರೆ ಹೊಟ್ಟೆಯ ಮೇಲೆ ಮುದದಿಂದ ತಪ್ತಚಕ್ರವನ್ನೆ ಬುಧರು
ಧರಿಸುವುದನು ವಿಧಿಸಬೇಕೆಂದು ತನು ಪದವ ಹೇಳಿತು ನಮ್ಮ ವೇದ || 16 ||

ತಪ್ತ ಚಕ್ರವ ಧರಿಸಬೇಕೆಂದು ತೊಡಗಿ ತತ್ ಪ್ರಸ್ತಾಪದಲಿ ಈ ಶ್ರುತಿಯ |
ಅರ್ಥಪೂರ್ವಕ ವಿಸ್ತರಿಸಿ ಪೇಳಿದ ಶಿವಮತ್ತೊಂದರ್ಥವನಿದಕೆ ಮೆಚ್ಚ || 17 ||

ಪವಿತ್ರಂ ಬ್ರಹ್ಮಣಸ್ಪತ್ಯಂ ಲೋಕವ್ಯಾಪ್ತಂ ಸುದರ್ಶನಂ
ತೇನಾತಪ್ತಾ ತನೂರ್ಯೇಷಾಂ ತೇ ನ ಯಾಂತಿ ಹರೇಃ ಪದಂ |
ಎಂಬೀ ಶ್ರುತ್ಯರ್ಥವ ತುಂಬಿ ಪೇಳಿದ ಪದನಂಬಿ ಕೇಳಿರೋ ನಾವೆಂದುದೇ ತತ್ವ ||

ಸೋಮರಸವ ಶೋಧಿಸುವ ಲೌಕಿಕ ವಸ್ತ್ರಕ್ಕಾ ಮಹಾಚಕ್ರ ಸನ್ನಿಧಿಯ |
ಧೀಮಂತರ್ ಮಾಡಿಸಬೇಕೆಂದು ಪವಿತ್ರ ನಾಮ ಶ್ರುತಿಯಿಂದ ಮಂತ್ರಿಸುವರು || 18 ||

ಪಾವನವ ಮಾಡಿಸುವ ಶಕ್ತಿ ನಮ್ಮ ಶ್ರೀದೇವಿಯರಸನ ಚಕ್ರಕೆಂಬುದನು |
ಭಾವಜ್ಞರಿಗೆ ತೋರಿಸಲು ಹರಿಚಕ್ರವನೆ ಪವಿತ್ರ ನಾಮದಿಂ ಶ್ರುತಿ ಕರೆಯಿತು || 19 ||

ಶೋಧಿಸುವುದಕೆ ಸಹಸ್ರಧಿದ್ರುಳ್ಳ ಮಾಧವನ ಪಾವನ ಚಕ್ರ ಬೇಕೆಂದು |
ಈದಿವ್ಯಚಕ್ರ ಮಂತ್ರವ ನ್ಯಾಯ ಕೋವಿದರಾದ ಮುನಿಗಳು ಮನ್ನಿಸುವರು || 20 ||

ಗಂಗೆಯುದಕದಿಂದ ತೊಳೆದ ವಸ್ತುವನ್ನು ಗಂಗಾಶಬ್ದದಿಂದ ಕರೆವರೆ ಮರುಳೆ ?
ತುಂಗ ಚಕ್ರಮಂತ್ರದಿಂದ ಮಂತ್ರಿಸಿದ ದ್ರವ್ಯ ಮಂಗಳ ಮಂತ್ರಾರ್ಥವಾಗುವುದೆ ? ||21 ||

ಲೌಕಿಕಾನ್ನವ ಶುದ್ಧಿ ಮಾಡುವುದಕೆ ವಿವೇಕಿಗಳು ವ್ಯಾಹೃತಿಯಿಂದ ಪ್ರೋಕ್ಷಿಸಿ |
ಬೇಕಾದ ಗಾಯತ್ರಿ ಮಂತ್ರದಿ ಮಂತ್ರಿಸಲೌಕಿಕಾನ್ನವು ಗಾಯತ್ರ್ಯರ್ಥವಹುದೆ || 22 ||

ಅದರಿಂದ ತ್ರಿಜದ್ಗುರುವಾದ ಶಿವನಾಜ್ಞದ ವಿಧಿಯ ಮಾಡಿದ ಮುನಿಗೆ ಗುರುವಾದ |
ಮದನವೈರಿಯ ಮತವು ಸೂತ್ರಕಾರರ ಮತವು ನಿಧಾನಿಸುತ್ತಿರಲೊಂದೆ ಮತವಾಯಿತು || 23 ||

ಇದನರಿಯದ ವಾದಿ ವಸ್ತ್ರದ ತುಂಡನಾಪದದಿಂದ ಕರೆದನದಕೆ ಮೂಲಕಾರಣ ।
ಪದುಮ ಪುರಾಣವ ಮುನಿಗಳೆಲ್ಲ ಬಲ್ಲರಿದನರಿಯದ ಭಟ್ಟ ಭಾಸ್ಕರ ತಸ್ಕರ ।। 24 ।।

'ಪವಿತ್ರಂ ಚರಣಂ ನೇಮಿರರಿಶ್ಚಕ್ರಂ ಸುದರ್ಶನಂ
ಸಹಸ್ರಾರಂ ಪ್ರಾಕೃತಘ್ನಂ ಲೋಕದ್ವಾರಂ ಮಹೌಜಸಂ
ವಿಷ್ಣುಚಕ್ರಸ್ಯ ನಾಮಾನಿ ಪರ್ಯಾಯೇಣ ನಿಬೋಧಮೇ'
ಎಂಬ ಸ್ಮೃತ್ಯರ್ಥವನು ತುಂಬಿಸಿ ಪೇಳಿದ ಪದವನಂಬಿಕೊಳ್ಳಿರೊ ನಾವೆಂದುದೆ ತತ್ವ ।। 25 ।।

ಪವಿತ್ರನಾಮ ಮೊದಲಾದ ಹತ್ತು ಪೆಸರು ಮಾಧವ ಚಕ್ರ ಪರ್ಯಾಯವಪ್ಪವೆಂದು ।
ಶಿವನು ಪೇಳ್ದ ತತ್ವ ಬಿಡುವರೆ ಮಾನವ ಅವನರಿಯದ ಅರ್ಥವಿನ್ನಾವ ಬಲ್ಲ ।। 26 ।।

ಹರನ ಭಕ್ತಳೆಂಬ ಗಿರಿಜಾದೇವಿಗೆ ಪುರಹರನೊಲಿದು ಪೇಳ್ದ ತತ್ವವನೆ ಬಿಟ್ಟು ।
ನರನ ಮಾತ ನಂಬೀಶ್ವರನುಕ್ತಿ ಜರಿವರೆ ಮರುಳೆ ತಾಯ ಮಾರಿ ತೊತ್ತ ಕೊಂಬುವರೆ ?

ಮುಕ್ಕಣ್ಣ ಪೇಳಿದರ್ಥವ ಬಿಟ್ಟು ಜಗದೊಳು ಗಿಕ್ಕಣ್ಣನಾದ ಪಾಮರನು ।
ಸೊಕ್ಕಿ ಮನ ಬಂದಂತೆ ನುಡಿಯೆ ಮೃಡ ಘುಡಘುಡಿಸಿ ರಕ್ಕಸರ ಕೊಲುವಂತೆ ಕೊಲುವ ।।

ಯತ್ತೇ ಪವಿತ್ರಮರ್ಚಿಷ್ಯಗ್ನೆ ಎಂಬ ಶ್ರುತಿ ಮತ್ತೆ ನಿನ್ನ ಖಂಡವ ಸುಡದೆ ?
ಚಿತ್ತಜನಯ್ಯನ ಚಕ್ರವೆಂಬ ಪವಿತ್ರಕ್ಕೆ ತಾಪವಪ್ಪುದೆ ವಾದಿ ।। 29 ।।

ಶತೋದ್ಯಾಮಂ ಹಿರಣ್ಮಯವೆಂಬ ವೇದ ಮತಿವಂತರ ಮತದಿಂದ ಚಕ್ರಕೊಪ್ಪುವುದೈಸೆ।
ಸುತಗೆ ಸೌವರ್ಣದ ಪ್ರಕಾರದಿಂದಚ್ಯುತನ ಮಹಿಮೆ ನೋಡು ಬಿಡು ದುರಾಗ್ರಹವ ।।30।।

ಗೋಭೂಹಿರಣ್ಯಾದಿ ದಿವ್ಯ ದಾನಂಗಳ ಸ್ವಭುಜದಲಿ ಚಕ್ರಾಂಕಿತ ಉಳ್ಳವರಿಗೆ ।
ಈ ಭುವನದೊಳಗೆ ಕೊಡಬೇಕೆಂತೆಂದು ನಾಗ ಭೂಷಣನೆ ನಿರ್ಮೈಸಿದನು ।। 31 ।।

ಒಂದುದಕ ಬಿಂದು ಒಂದು ತಂಡುಲವನ್ನು ಇಂದಿರೇಶನ ಭಕ್ತನಲ್ಲದವನಿಗೆ ।
ಎಂದೆಂದು ಕೊಡಬಾರದೆಂದು ಇಂದು ಮೌಳಿ ಎಂದವನಾಗಿ ಸಂದೇಹ ಸಲ್ಲ ।। 32 ।।

'ದ್ವಿರೇಖ ಮೂರ್ಧ್ವ ಪುಂಡ್ರಂ ಭವತಿ ತಪ್ತಂ ಚಕ್ರಂ ದ್ವಿಭುಜೇ ಧಾರಯತಿ'
ಈ ಮಾಧ್ಯಂದಿನ ಶ್ರುತಿ ಹನ್ನೆರಡನೆ ಖಂಡದಿ ತಪ್ತ ಚಕ್ರಧಾರಣವ ನಿರ್ಣೈಸಿತು ।।

ಇದು ಸ್ಪಷ್ಟ ವಚನವಾದುದರಿಂದ ತಪ್ತ ಚಕ್ರಧಾರಣೆ ಇಲ್ಲದವ ವೇದಬಾಹ್ಯ |
ಮದನನಯ್ಯನಪುರದಿ ಮುಕ್ತರಿಗಿದು ಬೇಕು ಇದ ಜರಿದವನಂಧಂತಮಕ್ಕೈದುವ || 33 ||

ಯೇ ಕಣ್ಠಲಗ್ನ ತುಲಸೀ ನಲಿನಾಕ್ಷಮಾಲಾ
ಯೇಬಾಹುಮೂಲ ಪರಿಶೋಭಿತ ಶಂಖ ಚಕ್ರಾಃ |
ಯೇ ವಾ ಲಲಾಟ ಫಲಕೇ ಲಸದೂರ್ಧ್ವ ಪುಣ್ಡ್ರಾಃ
ತೇ ವೈಷ್ಣವಾ ಭುವನ ಮಾಶು ಪವಿತ್ರಯನ್ತಿ ||

ಸಂತಪ್ತ ಶಂಖ ಚಕ್ರವು ಭುಜಯುಗದಲ್ಲಿ ಮಂತ್ರ ಪೂರ್ವಕವಾಗಿ ಧರಿಸಿ |
ಅಂತಕನ ಭಟರನಂಜಿಸಿ ಮೆರೆವ ಲಕುಮೀಕಾಂತನ ಭಜಕರೊಪ್ಪಿದರು || 34 ||

ಪೊಳೆವ ಪನ್ನೆರಡೂರ್ಧ್ವ ಪುಂಡ್ರಗಳಿಟ್ಟು ಶ್ರೀತುಳಸಿ ಪದ್ಮಾಕ್ಷಿಯ ಸರವ |
ಆಲಸದೆ ಧರಿಸಿದ ಪರಮ ವೈಷ್ಣವರು ಈ ಇಳೆಯ ಪಾವನ ಮಾಡುವರು || 35 ||

ಯೇ ಕಂಠಲಗ್ನ ಎಂಬ ಪದ್ಮಪುರಾಣ ಶ್ಲೋಕದಿ ಗೌರೀ ದೇವಿಗೆ |
ಶ್ರೀಕಂಠತಾನೇ ನಿರ್ಣೈಸಿ ಪೇಳಿದನಾಗಿ ಲೋಕಕ್ಕೆ ಸಂಶಯ ಸಲ್ಲ || 36 ||

ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥರ ಧರ್ಮದಿ ವಿಪ್ರರ ನಡೆಸಿ |
ನಿರ್ಮಮ ಯತ್ಯಾಶ್ರಮದಿ ಮತ್ತವರನೆ ನಮ್ಮ ನಾರಾಯಣನೆ ನಡೆಸಿದ || 37 ||

ಬ್ರಹ್ಮಕ್ಷತ್ರಿಯ ವೈಶ್ಯ ಶೂದ್ರರ ತಮ್ಮ ತಮ್ಮ ಕರ್ಮಮಾರ್ಗದಲಿ ನಡೆಸಿದ |
ಚಿನ್ಮಯ ರೂಪ ಎಲ್ಲರೊಳು ತಾನೆ ಪೊಕ್ಕು ನಿರ್ಮಲ ಪಥಕ್ಕೆರಗಿಸಿದ || 38 ||

ಕಾಲಕಾಲದಿ ಮಳೆಯ ಕರೆಸಿದ ಇಳೆಯುಳು ಕಾಲಕ್ಕೆ ಬೆಳೆಯ ಬೆಳೆಸಿದ |
ಕಾಲಕಾಲದಿ ಕಳುವ ನಿಲಿಸಿದ ಶ್ರೀಕಷ್ಣ ಕಾಲದಿ ಫಲವ ಮೆಲ್ಲಿಸಿದ || 39 ||

ವಿಧವೆಯರಿಲ್ಲ ಹರಿ ಪಾಲಿಸುವ ಕೃತಯುಗದಿ ವಿಧುರರೆನಿಸುವ ನರರಿಲ್ಲ |
ಮದುವೆ ಇಲ್ಲದವರಿಲ್ಲ ವಿಧಿಯ ಮೀರುವರಿಲ್ಲ ಅಧಮರೆನ್ನಿಸುವ ನರರಿಲ್ಲ || 40 ||

ಬಂಜೆಯರಿಲ್ಲ ಪತಿಗಂಜದ ಸತಿಯರಿಲ್ಲ ಸಂಜೆಯಲಿ ಮಲುಗುವವರಿಲ್ಲ |
ಕಂಜನಾಭನ ಮರೆವವರಿಲ್ಲ ಅತಿಥಿಗಳು ಭುಂಜಿಸದೆ ಉಂಬವರಿಲ್ಲ || 41 ||

ಅಂಧ ಕಂಗುಗಳಿಲ್ಲ ನೂರು ವರುಷದಿಂ ಕುಂದಿ ಬದುಕೋ ಜನರಿಲ್ಲ |
ನಿಂದ್ಯ ಮಾರ್ಗದಿ ನಡೆವವರಿಲ್ಲ ನಮ್ಮ ಗೋವಿಂದ ಪಾಲಿಸುವ ಕಾಲದಲಿ || 42 ||

ಎಲ್ಲಿ ನೋಡಲು ತೀರ್ಥಕ್ಷೇತ್ರಂಗಳು ಮತ್ತೆಲ್ಲಿ ನೋಡಲು ಯಜ್ಞಾದಿಗಳು |
ಎಲ್ಲ ಕಡೆಯಲ್ಲು ದೇವತಾ ಪೂಜೆಯು ಬಲ್ಲಿದ ಕೃಷ್ಣ ನಡೆಸಿದ || 43 ||

ಎಲ್ಲಿ ನೋಡಲ ವೇದ ಘೋಷಗಳು ಮತ್ತೆಲ್ಲಿ ನೋಡಲು ತಪಸ್ವಿಗಳು |
ಎಲ್ಲಿ ನೋಡಲು ಧನ ಧಾನ್ಯಂಗಳು ಮತ್ತೆಲ್ಲಿ ನೋಡಲು ಕೃಷ್ಣ ಪರರು || 44 ||

ಎಲ್ಲಿ ನೋಡಲು ದಾನ ಎಲ್ಲಿ ನೋಡಲು ಗಾನ ಎಲ್ಲಿ ನೋಡಲು ಹರಿಧ್ಯಾನ |
ಎಲ್ಲಿ ನೋಡಲು ಸ್ನಾನ ಎಲ್ಲಿ ನೋಡಲು ಜ್ಞಾನ ಎಲ್ಲಿ ನೋಡಲು ವ್ಯಾಖ್ಯಾನ || 45 ||

ಎಲ್ಲಿ ನೋಡಲು ಭಕ್ತಿ ಎಲ್ಲಿ ನೋಡಲು ಭುಕ್ತಿ ಎಲ್ಲಿ ನೋಡಲು ವಿರಕ್ತಿ |
ಎಲ್ಲಿ ನೋಡಲು ಯುಕ್ತಿ ಎಲ್ಲಿ ನೋಡಲು ಶಕ್ತಿ ಎಲ್ಲಿ ನೋಡಲು ವಿಪ್ರವೃತ್ತಿ || 46 ||

ಎಲ್ಲಿ ನೋಡಲು ದಿವ್ಯ ದೇವಸ್ಥಾನ ಮತ್ತೆಲ್ಲಿ ನೋಡಲು ರಥೋತ್ಸವವು |
ಎಲ್ಲಿ ನೋಡಲು ಮುತ್ತು ರತ್ನದ ಸರಗಳು ಎಲ್ಲಿ ನೋಡಲು ದಿವ್ಯನಗರ || 47 ||

ಎಲ್ಲಿ ನೋಡಲು ಪರಿ ಪರಿಯಾಟಗಳು ಮತ್ತೆಲ್ಲಿ ನೋಡಲು ನೃತ್ಯವಾದ್ಯ |
ಎಲ್ಲಿ ನೋಡಲು ಚಿತ್ರ ಭೂಷಣ ವಸನ ಚೆಲ್ವ ನಾರೀ ನರಸ್ತೋಮ || 48 ||

ಗಂಧ ಕಸ್ತೂರಿ ಕುಂಕಮ ರಂಜಿಪ ರಸದಿಂದ ಮಾಡಿದ ಓಕುಳಿಯ |
ಚಂದದಿಂದೊಬ್ಬರೊಬ್ಬರ ಮೇಲೆ ಚೆಲ್ಲಿ ಚಂದ್ರವದನೆಯರೊಪ್ಪಿದರು || 49 ||

ಒಂದು ಗರ್ಭದಿ ಕೂಸು ಒಂದು ಶಿಶು ಉಡಿಯೊಳಗೆ ಒಂದು ಬೆನ್ನಲ್ಲಿ ಕಟ್ಟಿಕೊಂಡು |
ಒಂದನಾಡಿಸುತಲಿ ಇಂದುಮುಖಿಯರ ಸಂದಣಿಯು ಮನೆ ಮನೆಯಲ್ಲಿ || 50 ||

ಒಳಗೆ ಮೊಸರು ಕಡೆವ ಸಂಭ್ರಮ ಹೊರಗೆ ಆಕಳ ಕರೆವ ರಭಸ ತುಂಬಿಹುದು |
ಅಳುವ ಮಕ್ಕಳ ತೊಟ್ಟಿಲೊಳಗಿಟ್ಟು ಪಾಡುವ ಲಲನೆಯರ ಗಂಭೀರನಾದ || 51 ||

ಯತಿಗಳ ಪೂಜೆ ವಿಪ್ರರ ಪೂಜೆ ಮನೆಯೊಳತಿಥಿ ಅಭ್ಯಾಗತರ ಪೂಜೆ |
ಶ್ರುತಿ ವಿಹಿತ ನಿತ್ಯ ನೈಮಿತ್ತಿಕ ಕರ್ಮಗಳು ವಿತತವಾದವು ಲೋಕದೊಳಗೆ || 52 ||

ಗಂಡು ಮಕ್ಕಳ ಮದುವೆ ಮುಂಜಿಗಳು ಅಲ್ಲಿ ತಂಡ ತಂಡದ ಕನ್ನಿಕೆಯರ |
ಉಂಡುಟ್ಟು ಕೊಂಬುದಕೆ ಉಳ್ಳಂಥ ಮನೆಗಳ ಕಂಡು ಕೂಡುವ ಸಂಭ್ರಮಗಳು || 53 ||

ನವಗ್ರಹ ಹೋಮನಾಂದಿಯ ಪೂಜೆಗಳ ಮಾಳ್ಪ ಭವನ ದೇವರಿಗೆ ದಕ್ಷಿಣೆಯ |
ತವಕದಿಂದಲಿ ಕೊಡಲು ಮಂಗಳಾರತಿಯನೆತ್ತುವರು ಮುದದಿ ಮುತ್ತೈದೆಯರು || 54 ||

ಅಯತ್ತವಾದ ಜೋಯಿಸರೋದುವ ಪ್ರಿಯವಾದ ಮಂಗಳಾಷ್ಟಕಗಳ |
ಆಯತಾಕ್ಷಿಯರ ಡವಳ ಶೋಭನಗಳ ಗಾಯನ ತುಂಬಿತಂಬರವ || 55 ||

ಮುತ್ತೈದೆಯರು ಬಂದು ಮುತ್ತು ರತ್ನಂಗಳ ಅರ್ತಿಯಲಿ ಛಿಕ್ಷವಿಕ್ಕುವರು |
ತೆತ್ತಿಗರೆಲ್ಲರುಡುಗೊರೆ ಉತ್ಸವದೊಳು ಸುತ್ತಿಂದ ತಂದು ಕೊಡುವರು || 56 ||

ಪರಿಪರಿ ಭಕ್ಷ್ಯ ರಸಾಯನಗಳ ಮಾಡಿ ಪರಿ ಪರಿ ಕಲಸೋಗರಗಳ |
ವಿರಚಿಸಿ ವಿಪ್ರರ ಕೂಡಿ ಭೂಮವನುಂಬುವರ ಸಂಭ್ರಮಗಳನೇನೆಂಬೆ || 57 ||

ಮಂಗಳದೇವಿಯರಸ ವಧುವರರಿಗೆ ಮಂಗಳವೀಯಲೆಂದೆಂದು |
ತುಂಗಭಾಗ್ಯಂಗಳು ಸಂಗಡಿಸುತಿರಲೆಂದು ಅಂಗನೆಯರು ಹರಸಿದರು || 58 ||

ಚಕ್ರವರ್ತಿಗಳ ಸೃಷ್ಟಿಸಿ ಕಾಲದಿ ಭೂಚಕ್ರ ಪಾಲಕರ ಮಾಡಿಸಿದ |
ವಿಕ್ರಮನವರಿಗೆ ಕೊಟ್ಟು ಮತ್ತವರಿಂದ ಸತ್ಯಕರ್ಮಗಳನೆ ನಡೆಸಿದ || 59 ||

ಮತ್ಸ್ಯ ಕೂರ್ಮನಾದ ಮತ್ತೆ ಮಹಿಯನೆತ್ತಿ ಕೀರ್ತಿಯ ಪಡೆದ, ಕಿಂಕರನ |
ಮೃತ್ಯುವ ಬಿಡಿಸಿದ, ಮತ್ತೆ ಬಲಿಯ ಕಿತ್ತು ಕ್ಷತ್ರಿಯರ ಉಕ್ಕು ತಗ್ಗಿಸಿದ || 60 ||

ಸಸೀತೆಗಭಯವಿತ್ತ ಸೇತುಬಂಧನ ರಾಮ ಮಾತುಳ ಕಂಸನ ಮಡುಹಿದ |
ಖ್ಯಾತ ಬುದ್ಧನಾಗಿ ಕಾಪಥಗಳ ತೋರ್ದ ಭೀತ ಕಲಿಯ ಬೀಳುಕೊಟ್ಟ || 61 ||

ಶಿವನ ವೈರಿಯ ಕೊಂದ ಶ್ರುತಿಯನವನಿಗೆ ತಂದ ಭುವನ ಪಾವನ ಭವ್ಯಚರಿತ |
ಇವನ ಪೋಲುವರಾರು ಈ ಜಗದೊಳಿನ್ನು ಜವನ ಭಟರ ಜಡಿವ ಮಲ್ಲ || 62 ||

ಇಂತು ಜಗಂಗಳ ಸಂತತ ಪೊರೆವ ದುರಂತ ದೈತೇಯ ಕೃತಾಂತ |
ಚಿಂತೆಯ ನುಗ್ಗೊತ್ತಿ ಸಂತೋಷವೀವ ಶ್ರೀಕಾಂತ ಸಂತರ ಭಾರವಂತ || 63 ||

ಸಕಲ ಸದ್ಗುಣಪೂರ್ಣ ಸಜ್ಜನದಾತಾರ ಭಕ್ತವತ್ಸಲ ಭಯನಾಶ |
ಸುಖಚಿನ್ಮಯಕಾರ ಶುದ್ಧ ದೋಷ ವಿದೂರ ನಿಖಿಲೇಶ ನಿನ್ನ ನಂಬಿದೆನೋ || 64 ||

ಉಂಬೋದು ಉಡುವೋದು ಲಕುಮಿದೇವಿಯದು ತಲೆಗಿಂಬಿಟ್ಟು ಮಲಗುವ ನೆಲದ |
ಇಂಬು ಕುಂಭಿಣಿಯದು ಇವರಾಳ್ದನೊಲ್ಲೆಂಬ ಢಂಬಕನೆಲ್ಲಿಹನೆಂತೆಂಬ || 65 ||

ಉಂಡ ಮನೆಗೆರಡನು ಬಗೆವ ಭಂಡರ ಕಂಡು ಪಂಡಿತ ಜನರು ಮನ್ನಿಸರು |
ಕಂಡ ಕಂಡರ ಮಾತು ಕೇಳದಲೆ ಬಲ್ಲವರು ಪಾಂಡವಪ್ರಿಯನ ಮನ್ನಿಸಿರೋ || 66 ||

ಅದರಿಂದ ಸಕಲವಾದಿಗಳು ನಾರಾಯಣನ ಪದ ಪದುಮವ ನಂಬಬೇಕು |
ಇದು ಪಕ್ಷಪಾತದ ನುಡಿಯಲ್ಲವೆಂಬೋದು ಬುಧರು ತಾವೇ ವಿಚಾರಿಸಿರೊ || 67 ||

ಸೀತೆಗೆ ಚಿಂತಿಸಿ ಭೀತಿಯ ತೋರಿಸಿ ಭೂತನಾಥನ ಯಾತ್ರೆ ಮಾಡಿ |
ಪ್ರೀತಿಯಿಂ ಮುನಿಗಳಿಗೆ ನಮಸಿ ನಮಿಸಿ ಕೃಷ್ಣ ದೈತೇಯರಿಗೆ ಮೋಹವಿತ್ತ || 68 ||

ಬಾಯೊಳು ಈರೇಳು ಜಗವ ತಾಯಿಗೆ ತೋರಿ ಕೈಯಲ್ಲಿ ಬಲುಗಿರಿಯನೆತ್ತಿ |
ಮೈಯಲ್ಲಿ ವಿಶ್ವರೂಪವ ತೋರಿಸಿ ಕೃಷ್ಣ ಪ್ರೀಯರ್ಗೆ ಸುಜ್ಞಾನವನ್ನಿತ್ತ || 69 ||

ಮೊಲೆಯನೋಡಲು ಶಿಶು ಪಾಲ ಕೊಂಬಂತೆ ಸತ್ ಕುಲಕೆ ಸಮ್ಯಗ್ ಜ್ಞಾನ ಬಂತು |
ಜಲದೊಳಗೆ ಮೊಲೆಯ ಪಿಡಿವ ಜಿಗಳೆಗಳಂತೆ ಖಳರು ಕುತ್ಸಿತಕ್ಕೆರಗಿದರು || 70 ||

ಮಿಶ್ರಚರಿತದಿಂ ಮಿಶ್ರಜೀವರಿಗೆ ಮಿಶ್ರಜ್ಞಾನವನೆ ಬೆರಸುವ |
ವಿಸ್ಮಯವಲ್ಲವೆ ಮಾತನಾಡದೆ ಹರಿ ಸ್ವಸ್ವಯೋಗ್ಯತೆಗೆ ಮತಿಯಿತ್ತ ||71 ||

ಸುಖದುಃಖರೂಪರು ಮಧ್ಯಮ ಜೀವರು ಸುಖಮಾತ್ರರೂಪರುತ್ತಮರು ।
ಸುಖಹೀನ ದುಃಖ ರೂಪರು ಅಧಮ ಜೀವರು ವಿಕೃತಿ ಇಲ್ಲಿದಕೆ ಎಂದೆಂದು ॥ 72 ॥

ಈ ನಿತ್ಯಸುಖವೆ ಕೈವಲ್ಯ ಉತ್ತಮರಿಗೆ ಆ ನಿತ್ಯ ದುಃಖ ಮಾತ್ರಾಧಮರಿಗೆ ।
ಈನ್ಯಾಯದಿಂದ ಸ್ವರೂಪ ಸುಖದುಃಖವು ಮಾನುಷರಿಗೆ ನಿತ್ಯ ಸಂಬದ್ಧ ॥73 ॥

ಲಿಂಗದೇಹವೆಂಬ ಪ್ರಾಕೃತ ದೇಹದ ಸಂಗದಿಂದ ಸಂಸಾರದಲ್ಲಿ ।
ಕಂಗೊಳಿಸುವುದು ಗಡ ಈ ಲಿಂಗದೇಹದ ಭಂಗವಿಲ್ಲೆಂದು ತೋರುವುದು ॥ 74 ॥

ಈಗಿದ್ದ ಸುಖದುಃಖ ಎಲ್ಲರಿಗೂ ಸರಿಭಾಗ್ಯವೆಂದೊಬ್ಬೊಬ್ಬರಿಗೆ ।
ಮೇಗುಂಬ ಸ್ವರೂಪ ಸುಖದುಃಖವೆ ಮಿಶ್ರರಿಗು ಸಂಸೃತಿಯಾಗ ಬೇಕು ॥ 75 ॥

ಸುಖದುಃಖವೆರಡು ಕೂಡಿಹುದೆ ಸಂಸಾರವೆಂದು ಸಕಲ ಬುಧರಿಗು ಸಂಮತವು ।
ಪ್ರಕೃತಿ ಪೋದ ಮೇಲೆ ಚಿದ್ರೂಪ ಸುಖದುಃಖ ವ್ಯಕುತಿಯಾದುದಕೆ ಭಯವಿಲ್ಲ ॥ 76 ॥

ಅದರಿಂದ ತನುಭೃತ್ ಸ್ವಭಾವ ಸಂಪ್ರಾಪ್ತಿಯಂಬುದಿದೆ ಮಿಕ್ಕುದೆಲ್ಲೌಪಾಧಿಕ ।
ಬುಧರೆಲ್ಲ ನೋಡಿ ಈ ಫಲಕೆ ತುದಿಯಳು ತ್ರಿವಿಧರಿಗು ಲಿಂಗಭಂಗ ಬೇಕು ॥ 77 ॥

ಅಲ್ಲದಿದ್ದರೆ ತ್ರಿವಿಧ ಜೀವ ಸ್ವಭಾವಕ್ಕೆ ಕಲ್ಲ ಹಾಕಿದವ ಕೋವಿದನೆ ?
ಅಲ್ಲಿಯೂ ಇಲ್ಲಿಯೂ ಇಲ್ಲದ ಕಾರಣ ಬಲ್ಲವರಿದ ಸ್ವಭಾವವೆನರು ॥ 78 ॥

ಬಲ್ಲಿದ ಹರಿಗೆ ವೃಥಾ ಸೃಷ್ಟಿ ಸಲ್ಲದು ಛಲ್ಲವ್ಯಾತಕೆ ಮನುಜನಿಗೆ ।
ಚೆಲ್ಲಿಪೋಪುದೆ ಬರಿದೆ ಅವರು ಆದಿಕಾಲದಲ್ಲಿ ಮಾಡಿದ ಸಾಧನಗಳು ॥ 79 ॥

ಮೂರುವಿಧದ ಸಾಧನದಿಂದ ಮೂವರಿಗು ಬೇರೆ ಬೇರೆಯೆ ಫಲ ಬೇಕು ।
ಓರಂತೆ ಶಾಸ್ತ್ರದ ಕೃತಹಾನಿಗಳು ಈಗ ಬಾರದಿರವು ಇಂತಲ್ಲದಿರೆ ॥ 80 ॥

ಭಕ್ತಿ ದ್ವೇಷಗಳಿಗೆ ಫಲ ಉಂಟೆಂಬ ವೇದದುಕ್ತಿ ಮಧ್ಯಮ ಜೀವರಲ್ಲಿ ।
ವ್ಯರ್ಥವಾದರೆ ಶ್ರುತಿಯರ್ಥವು ಕೆಡುವುದು ನಿತ್ಯ ಶ್ರುತಿಯ ಕೆಡಿಸದಿರು ॥ 81 ॥

ಅದರಿಂದ ತ್ರಿವಿಧ ಜೀವರಿಗು ಲಿಂಗದೇಹ ತುದಿಯೊಳು ಹೋಹುದೆಂಬುದು |
ಬುಧರಿಗು ಸಂಮತ ಇದನರಿಯದ ಮೂಢ ಒದರಿದರೇನು ಫಲವಾಹೋದು || 82 ||

ತತ್ವಜ್ಞಾನ ಮಿಶ್ರಜ್ಞಾನ ಮಿಥ್ಯಾಜ್ಞಾನ ಶಕ್ತಿಯಿಂದ ಲಿಂಗದೇಹ |
ಉತ್ತಮ ಮಧ್ಯಮಾಧಮ ಜೀವರೊಳು ಪೋಕು ಮತ್ತೆ ತ್ರಿವಿಧ ಭೋಗವಹವು || 83 ||

ವಿರಜೆಯಿಂಬ ಪುಣ್ಯ ನದಿಯಿಂದ ಕೆಲವರಿಗೆ ಪರಿದು ಪೋಪುದು ಲಿಂಗದೇಹ |
ಉರಗನ ಪೊರೆಯಂತೆ ಜ್ಞಾನ ಪಕ್ವವಾದರೆ ಇರಲರಿಯದವರಿಗೆ || 84 ||

ಜ್ಞಾನಕ್ಕೆ ಹಿರಿತನ ಕೊಡಬೇಕೆಂತೆಂದು ಶ್ರೀನಾಥ ವಿರಜಾನದಿಯಲ್ಲಿ |
ಜ್ಞಾನಿಗಳ ಮುಣುಗಿಸಿ ಮುಕ್ತರ ಮಾಡಿ ತನ್ನ ಜಗದೊಳಿಟ್ಟುಕೊಂಬ || 85 ||

ಹೀನರಿಗೆ ಮೈಲಿಗೆ ವಸ್ತ್ರಪೋದರೆ ಸಾಕು ಸ್ನಾನವವರಿಗೆ ಬೇರೆ ಬೇಡ |
ಜ್ಞಾನಿಗಳಿಕಾ ವಸ್ತ್ರಪೋದ ಮೇಲೆ ಶುದ್ಧ ಸ್ನಾನ ಬೇಕೆಂದು ಪ್ರಸಿದ್ಧ || 89 ||

ಇಂತು ಶ್ರೀಕಾಂತ ಮೂವರಿಗೆ ಮೂರು ಗತಿ ಅಂತು ತುದಿಯಲಿ ಕೊಡುವನು |
ಸಂತತ ಉತ್ತಮ ಮಧ್ಯಮಾಧಮ ಲೋಕವಂತರಂತರದಿ ತುಂಬಿಹರು || 87 ||

ಕಾಲೋಽಯಂ ದ್ವಿರಾರ್ಧಾಖ್ಯೋ ನಿಮೇಷ ಉಪಚರ್ಯತೇ |
ಅವ್ಯಾಕೃತಸ್ಯಾನನ್ತಸ್ಯಹ್ಯನಾದೇರ್ಜಗದಾತ್ಮನಃ ||

ಒಮ್ಮೆ ಕಣ್ಣು ಮುಚ್ಚಿ ತೆರೆಯುವ ಕಾಲದಿ ಜನ್ಮ ಮರಣವವೈದುವ |
ಬ್ರಹ್ಮಾದಿ ಜೀವರ ಹರಿಗೆ ಸರಿಯೆಂಬ ದುರ್ಮತದವರನೇನೆಂಬೆ || 88 ||

ಹರಿಗಿದು ನಿಮೇಷ ಉಪಚರ್ಯತೇ ಎಂದು ಸಿರಿ ಭಾಗವತ ಪೇಳಿತಾಗಿ |
ಭರದಿ ನಿಮೇಷವಿದೆಲ್ಲವಾದರೆ ಕಾಲ ದಿರವನರಿವ ಕವಿಯದಾವ ? || 89 ||

ಅಂತಾದಿ ಇರದೆ ಸಂತತ ಸುಖಿಪ ನಿಶ್ಚಿಂತ ಆದಿ ನಾರಾಯಣಗು |
ಇಂತು ಪರಾಂತದಿ ಅಳಿದುಳಿದು ಹೋಹರಿಗು ಅಂತರವ ನೀವೇ ನೋಡಿರೊ || 90 ||

ಹರಿಯ ಸರ್ವೋತ್ತಮ ಹರಿಯೆ ಪರದೇವತೆ ಹರಿಯೆ ಸಕಲ ವೇದವೇದ್ಯ ।
ನಿರುಪಮ ಸತ್ಕೀರ್ತಿ ನಿತ್ಯ ನಿರ್ಮಲಮೂರ್ತಿ ಸುರಚಕ್ರವರ್ತಿ ಜಯ ಜಯತು || 91 ||

ಶ್ರೀ ಹಯವದನ ಆಶ್ರಿತಜನ ಮೋದನ ಮೋಹಾಂಧಕಾರ ಮಾರ್ತಂಡ ।
ಸೋಹಮೆಂಬವರಿಗೆ ಶೋಕವ ನೀವ ನಿರಹಂಕಾರಿಗಳ ರಕ್ಷಿಸುವ || 92 ||

ಮುತ್ತು ರತ್ನ ತೆತ್ತಿಸುವಂತೆ ಸುತತ್ವಸಾರಗಳ ಬಿತ್ತರವ ।
ಯುಕ್ತಿಯಿಂದಲೆ ಪೇಳ್ದ ವಾದಿರಾಜನ ಕೃತಿಯೊಳರ್ತಿಯ ಚತುರ್ಥ ಸಂಧಿ || 93 ||

ಶ್ರೀಧರ ಹಯವದನ ರಾಯನ ದಯದಿಂದ ವಾದಿರಾಜೇಂದ್ರ ರಚಿಸಿದ ।
ಈ ದಿವ್ಯಕಾವ್ಯದಿ ಸ್ಥಿತಿಯನೊರೆದ ರಮ್ಯವಾದ ತುದಿಯ ಸಂಧಿ ಪೊಸಗೆ || 94 ||

ಭಯವ ಹರಿಸುವ ಪದ ನಯವ ತೋರುವ ಪದ 'ಪ್ರಿಯ ಮುಕ್ತಿ ಪದವನ್ನೈದಿಸುವ ಪದ।
ಹಯವದನ ದೇವನ ದಯಕೆ ಪಾತ್ರನಾಗಿ ಜಯಿಸುವ ವಾದಿರಾಜನ ಪದ || 95 ||

ಆಯುಷ್ಯ ರೆಚ್ಚಲಿ ಸಿರಿಯರಸ ಮೆಚ್ಚಲಿ ಶ್ರೇಯೋಮಾರ್ಗ ಮನ ಮೆಚ್ಚಲಿ ।
ಮಾಯೆ ಬೆಚ್ಚಲಿ ಸುಜನರಾಯಾಸ ಬಿಚ್ಚಲಿ ಬಾಯಿ ಮುಚ್ಚಲಿ ಕುತರ್ಕಿಗಳು || 96 ||

ಭಕ್ತಿಯೊಳಾಡಲಿ ಮುಕ್ತಿಯ ಬೇಡಲಿ ಸುಖದ ರಾಶಿಗಳ ನೋಡಲಿ ।
ವಿಕೃತಿಗಳೋಡಲಿ ಸುಕೃತಗಳು ಕೂಡಲಿ ಅಖಿಳರೀ ಕೃತಿಯ ಪಾಡಲಿ || 97||

ಇಂತಿಪ್ಪ ಹರಿಲೀಲೆ ದಶ ದಿಶ ಮುಟ್ಟಲಿ ಸಂತರ ಭಯಗಳಟ್ಟಲಿ ।
ಚಿಂತೆಗಳ ಕಟ್ಟಲಿ ಕೃತಾಂತವರಟ್ಟಲಿ ಸಂತತ ಖಳರೆದೆ ಮೆಟ್ಟಲಿ || 98 ||

ಈ ದಿವ್ಯಕೃತಿಕಮಲ ಕೃಷ್ಣಾರ್ಪಿತವಾಗಲಿ ಶ್ರೀದೇವಿ ಇದನೆ ಕೈಪಿಡಿಯಲಿ ।
ಮೋದದಿ ಸದಮಲ ಸಂಪದ ವೀಯಲಿ ವಾದಿರಾಜೇಂದ್ರ ಗುರುಯೋಗಿ ವರಗೆ || 99 ||

ಅದುಭುತವಲ್ಲವೆ ಹಯವದನ ತನ್ನ ಪದಪದುಮದ ಸನ್ನಿಧಿಯಲ್ಲಿ ।
ಹುದುಗಿಸಿದ ವಾದಿರಾಜೇಂದ್ರನ ಪಾದೋದಕ ವಿವಿಧ ಭೀತಿಯನೊಡೆದಟ್ಟುವುದು||100|

ಭೂತಪ್ರೇತಗಳಿವನ ಪಾದೋದಕ ಭೀತಿಗೆ ಕಾತರಿಸಿ ದಶದಿಶಿ ಓಡುವುವು |
ಪ್ರೀತಿಯಿಂದಲಿ ಜನರು ಕೊಡುವ ಕಾಣಿಕೆಗೆ ಶ್ರೀನಾಥನು ಜನರ ಸಲಹುವನು || 101 ||

ಜನ್ಮಾಂತರ ಋಣದಿ ಕರ್ಮಭೂಮಿಯೊಳು ಬೊಮ್ಮಕ್ಕಸನಾಗಿ ಜನಿಸೆ |
ಅಮ್ಮ ! ಈ ಮುನಿಗೆ ಹಣವವರಿಂದ ಕೊಡಿಸಿ ತಮ್ಮ ಋಣ ತೀರಿತೆಂದೊಪ್ಪುವನು||102||

ದೇಶದೇಶದಿಂದ ಕಪ್ಪಕಾಣಿಕೆಗಳ ಆ ಸರ್ವೋತ್ತಮನೆ ತರಿಸುವ |
ಸ್ವಸೇವಕನ ಕೈಯ ರಥೋತ್ಸವ ಮಾಡಿಸಿ ಭಾಸುರ ಯಶವ ತಂದಿತ್ತ || 103 ||

ವಾಗೀಶ್ವರಿ ದೇವಿ ವದನದಿ ನಿಲ್ಲಿಸಿ ಸರ್ವಾಗಮ ತತ್ವಸಾರವನು |
ಯೋಗಿಗಳೆಲ್ಲರು ತಲೆದೂಗುವಂದದಿ ಆವಾಗಲಿವರಿಗೊಲಿದಿಹರು || 104 ||

ಇಳೆಗೆ ಇಟ್ಟಚೆಂಡು ಪುಟವೆದ್ದು ವ್ಯೋಮದ ತಳಕೇರಿ ಒದಗಿ ಇಮ್ಮಡಿಸಿ |
ಪೊಳೆವಂತೆ ವೈಷ್ಣವರು ಖಳರಿಗಳುಕದೆ ಹರಿಯ ಒಲವಿಂದ ದಿನದಿನ ಹೆಚ್ಚುವರು||105||

ಕಣ್ಣುಕಾಣದ ಬಲು ಜೀರ್ಣದೇಹದವನ ಮುನ್ನ ತಿದ್ದಿ ಮಂಗಳವಿತ್ತು |
ಉನ್ನತ ಕೀರ್ತಿಯ ಜಗದೊಳು ತುಂಬಿಸಿದ ಪ್ರಸನ್ನ ಹಯವದನನಿಗೆಣೆಯೆ || 106 ||

ಇನ್ನು ಹಯವದನ ಎಲ್ಲ ಇಹ ಪರಗತಿಗೆ ನಿನ್ನ ಕಾರುಣ್ಯ ಕಾರಣವೊ |
ಅನ್ಯರನರಿಯೆ ಶರಣ್ಯ ನೀ ಕೈವಿಡಿದು ಎಲ್ಲ ರಕ್ಷಿಪ ಭಾರ ನಿನ್ನದೊ || 107 ||

ತತ್ವಸಾರದ ಸೊಬಗಿನ ಸೋನೆಯನು ಹರಿ ಭಕ್ತನೆನಿಪ ವಾದಿರಾಜ |
ಭಕ್ತಿ ಭರಿತನಾಗಿ ಹೇಳಿದನಿದ ಕೇಳಿ ಸತ್ಸಭೆ ಸಂತೋಷಿಸಲಿ || 108 ||

ಇದು ಪುಣ್ಯಕತೆ ಲೋಕಕ್ಕಿದೆ ಮುಕುತಿಯ ಪಥ ಇದ ಕೇಳುವವನೆ ಕೃತಾರ್ಥ
ಇದು ಸರ್ವಸಾಧನ ವಿದುಗಳಿಗೆ ಸಮ್ಮತ ಮುದವನೀವುದು ಕೇಳ್ವ ಜನಕೆ || 109 ||

ಮೊದಲ ಸಂಧಿಗೆ ನೂರ ನಾಲ್ವತ್ತು ಪದಗಳು ಪದಗಳೈವತ್ತೈದು ದ್ವಿತೀಯಕ್ಕೆ |
ಅದರ ಮೇಲಣ ಸಂಧಿ ಪದಗಳೆಂಬತ್ತೆರಡು ತುದಿಯ ಸಂಧಿಗೆ ನೂರಹನ್ನೊಂದು||110||

**ಇಂತು ಮುನ್ನೂರೆಂಬತ್ತೆಂಟು ಪದಗಳ ಸಂತೋಷದಿ ವಾದಿರಾಜ |**

**ಅಂತರಂತರದಿ ಪ್ರಮಾಣ ಶ್ಲೋಕಂಗಳ ತಿಂತಿಣಿಯ ಕೂಡಿ ಮಾಡಿದ || 111 ||**

ಗುರುಮಖಿಲಗುಣಜ್ಞಂ ಸದ್ಗುಣೈಕಾಧಿವಾಸಂ

ಶಮದಮ ಪರಿನಿಷ್ಠಂ ಸತ್ಯನಿಷ್ಠಂ ವರಿಷ್ಠಮ್ |

ಸಕಲಸುಜನ ಶಿಷ್ಠಂ ನಿತ್ಯನಿರ್ಧೂತಕಷ್ಟಂ

ಹಯಮುಖಪದನಿಷ್ಠಂ ಮಾಂ ಭಜನ್ತು ಪ್ರಪನ್ನಾಃ ||

|| ಶ್ರೀಲಕ್ಷ್ಮೀ ಹಯಗ್ರೀವಾರ್ಪಣಮಸ್ತು ||

*Sri Vadiraja revered as Bhavi Sameera, with his astounding depth of Vedic expanse, has churned out the nector of Madhwa Philosphy, in this lucid work stuffed with all the intricate elements.*

---